ಶ್ರೀ ನಾಗನ ಪದಗಳು

ಲೇ: ಜಿ.ಪಿ. ರಾಜರತ್ನಂ

1952

ಕರ್ಣಾಟಕ ಸಂಘ
ಸೆಂಟ್ರಲ್ ಕಾಲೇಜ್, ಬೆಂಗಳೂರು

'ರತ್ನನ ಪದ'ಗಳ ರತ್ನನಿಗಿಂತ 'ನಾಗನ ಪದ'ಗಳ ನಾಗ ಹದಿನೆಂಟು ವರುಷ ಬೆಳೆದವನು. ಅವನು ಓದು ಬರಹ ತಿಳಿಯದವನು; ಇವನು ಅಕ್ಷರಸ್ಥ.

ಅವನಿಗೆ ಗೊತ್ತಿದ್ದದ್ದು ಮೈಸೂರಿನ ಒಂದು ಮೂಲೆಯ ಮಿತಕನ್ನಡ ಮಾತ್ರ: ಇವನಿಗಾದರೋ ಮೈಸೂರು ಮಂಗಳೂರು ಧಾರವಾಡ ಸರ್ವಕರ್ಣಾಟಕದ ನುಡಿಗಳು ಸೋಕಿದಂತೆ ಇದೆ.

ಅವನ ಪ್ರಪಂಚದಲ್ಲಿ ಮೂರುಪಾಲು ಹೆಂಡದಂಗಡಿ; ಇವನದರಲ್ಲಿ ಮೂರುವರೆ ಪಾಲು ಮನೆ, ಮಟ, ಹೆಂಡತಿ, ಮಕ್ಕಳು.

ದಾಂಪತ್ಯಧರ್ಮದ ಪಾಲನೆಯಲ್ಲಿ ಅವನೂ ಇವನೂ ಅಣ್ಣತಮ್ಮಂದಿರು; ಅವನ ಪಾಲಿನ ಪೈರು ಭಾದ್ರಪದ ದಲ್ಲೆ ಒಣಗಿಹೋಯಿತು, ಇವನು ಅಣ್ಣಮ್ಮನ ಅನುಗ್ರಹ ದಿಂದ ಸುಗ್ಗಿಯನ್ನು ಮೂರು ಸಲ ಕಂಡಿದ್ದಾನೆ.

ಅವನಂತೆಯೇ ಇವನಿಗೂ ನಕ್ಕು ನಗಿಸುವುದು ಸಹಜದ ಧರ್ಮ. ಪುಣ್ಯವಶದಿಂದ ಅವನ ಜೀವನಕ್ಕಿಂತ ಇವನ ಜೀವನ ಹೆಚ್ಚು ಪರಿಣತವಾಗಿದೆ. ಅವನಿಗಿಂತ ಇವನ ಅನುಭವ ಹೇಗೆ ಭಿನ್ನವಾದುದೋ ಹಾಗೆಯೇ ಅದನ್ನು ಹಾಡಿಕೊಳ್ಳುವ ಸೊಗಸೂ ಬೇರೆಯಾದುದು.

ರತ್ನನ ಪದಗಳು ನೀರಿನ ಹಾಗೆ ಹರಿದರೆ, ನಾಗನ ಪದಗಳು ಹಾವಿನ ಹಾಗೆ ಹರಿಯುತ್ತವೆ.

ಬೆಲೆ: **ಒಂದೂಕಾಲು ರೂಪಾಯಿ.**
ಕ್ಯಾಲಿಕೊ ಪ್ರತಿ: **ಎರಡೂಕಾಲು ರೂಪಾಯಿ.**

ನಾಗನ ಪದಗಳು

ಜಿ. ಪಿ. ರಾಜರತ್ನಂ

ಕರ್ಣಾಟಕ ಸಂಘ
ಸೆಂಟ್ರಲ್ ಕಾಲೇಜ್, ಬೆಂಗಳೂರು

ಇದನ ನಾ ಬರೆದೋನು: ರತನ!

ಯೋಳದೇ	} {	ಇದರಾಗ
ಕ್ಯೋಳದೇ		ಅದರಾಗ

ಕೈ ಯಾರಾರ್ ಆಕೀರಿ! ಜತನ!

ಮೊದಲನೆಯ ಮುದ್ರಣ:
೧, ಸೆಪ್ಟೆಂಬರ್, ೧೯೫೨

ಬೆಂಗಳೂರಿನ ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ
ಯು. ನರಸಿಂಹ ಮಲ್ಯರಿಂದ ಮುದ್ರಿತವಾಯಿತು

ಬರೆದವನ ಬಿನ್ನಹ

"ರತ್ನ"ನಾಗಿ ಮರೆಯಲ್ಲಿ ಇದ್ದವನು "ನಾಗ"ನಾಗಿ ಹುತ್ತದಿಂದ ಹೊರಗೆ ಬರಲು ಕಾರಣವಾದ ಕೆಲವು ವಿನಾಕಾರಣವಚನಗಳನ್ನು ಎರಡು ವರ್ಷಗಳ ಹಿಂದೆ ಬರೆದ ನನ್ನ ತರುಣಮಿತ್ರರೊಬ್ಬರಿಗೆ—

ನಾಗನ ಹೆಡೆಯಾಟಕ್ಕೆ ಆಗಾಗ್ಗೆ-ಎಡೆಕೊಟ್ಟ "ಕೊರವಂಜಿ" ಮಾಸಪತ್ರಿಕೆಯ ಮಾನ್ಯ ಸಂಪಾದಕರಿಗೆ—

ಈ ಕವನಗಳನ್ನು ಕಂಡಾಗ ಕೈಪರೆಯಾಡಿಸಿದ ಆ ಪತ್ರಿಕೆಯ ಕೆಲವರು ವಾಚಕಮಿತ್ರರಿಗೆ—

ನಾಗನ ಪದಗಳನ್ನು ಓದಿಸಿ ಕೇಳಿದ ಹಿಂದುಸ್ಥಾನ್ ಏರ್ ಕ್ರಾಫ್ಟ್ ಕಂಪೆನಿಯ ಕನ್ನಡ ಸಂಘಕ್ಕೆ, ಗೋಖಲೆ ಸಾರ್ವಜನಿಕ ಸಂಸ್ಥೆಗೆ, ಮೆಡಿಕಲ್ ಹೈಸ್ಕೂಲ್ ಅಸೋಸಿಯೇಷನ್ನಿಗೆ, ಅಲ್ಲಿನ ಸಹೃದಯ ಸದಸ್ಯರಿಗೆ—

ಈ ಪದಗಳನ್ನು ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘದಿಂದ ಪ್ರಕಟಿಸಬೇಕೆಂದು ಸಲಹೆಕೊಟ್ಟು ಸೂಚಿಸಿ, ನನ್ನ ಸಂಕೋಚವನ್ನು ತೊಲಗಿಸಿದ ಅಲ್ಲಿನ ಉಪಾಧ್ಯಕ್ಷರಿಗೆ—

ಈ ನೆಪದಲ್ಲಿ, ಇಪ್ಪತ್ತು ವರುಷಗಳಾದ ಮೇಲೆ ಇನ್ನೊಂದು ಮತ್ತೆ, ನನ್ನ ಕೃತಿಯೊಂದಕ್ಕೆ ಆಶ್ರಯಕೊಟ್ಟ ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘಕ್ಕೆ—

ಹೀಗೆ "ನಾಗನ ಪದಗಳು" ಹುಟ್ಟಿ, ಹೆಜ್ಜೆಯಿಟ್ಟು, ಪುಸ್ತಕವಾಗಿ ಬರುವುದಕ್ಕೆ ಕಾರಣರಾದವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯ ಸಾಷ್ಟಾಂಗ ನಮನ.

ಜಿ. ಪಿ. ರಾಜರತ್ನಂ

ಒಂದೆರಡು ಸೂಚನೆ

'ನಾಗನ ಪದ'ಗಳ ಬಗೆ ಬಂಧ ಭಾಷೆ 'ರತ್ನನ ಪದ'ಗಳ ಬಗೆ ಬಂಧ ಭಾಷೆಗಳಿಗಿಂತ ಭಿನ್ನ; ಆದರೂ, ಇವು ಎರಡೂ ಒಂದೇ ಜಾತಿಯವು, ಪ್ರಾಕೃತವರ್ಗದ ಪದ್ಯರಚನೆಗಳು.

ಬಾಯಿಮಾತಿನ ಬಿಗಿಯನ್ನು, ಓಟವನ್ನು, ಹರಿತವನ್ನು ಬರೆ ವಣಿಗೆಯಲ್ಲಿ ತರುವುದು ಅಸಾಧ್ಯವಲ್ಲ, ಶ್ರಮಸಾಧ್ಯ. ಶ್ರಮಸಾಧ್ಯವಾದದ್ದನ್ನು ಓದಿ ತಿಳಿಯುವುದು ಅಸಾಧ್ಯವೇನಲ್ಲ, ಅದು ಕೂಡ ಶ್ರಮಸಾಧ್ಯವೇ.

ಓದುವಾಗ ಈ ಶ್ರಮವನ್ನು ಆದಮಟ್ಟಿಗೆ ಕಡಮೆಮಾಡಲು ಒಂದೆರಡು ಸಾಧನಗಳನ್ನು ಇಲ್ಲಿ ಬಳಸಿದೆ. ಅವು ಯಾವುವೆಂದರೆ:—

ಒಂದು: ಎಲ್ಲೆಲ್ಲಿ ಪದ ಅರ್ಧಾಕ್ಷರವಾಗಿ ನಿಲ್ಲುತ್ತದೋ, ಅದನ್ನು ಅಲ್ಲಿಗೆ ನಿಲ್ಲಿಸದೆ, ಮುಂದಿನ ಪದದ ಆದ್ಯಕ್ಷರದೊಂದಿಗೆ ಓದಿಕೊಂಡು ಹೋಗಬೇಕು. ಹಾಗೆ ಓದಿದರೆ, ಪದ್ಯ ಹರಿಯುತ್ತದೆ— ನೀರು ಹರಿದ ಹಾಗೆ; ಇಲ್ಲದಿದ್ದರೂ ಹರಿಯುತ್ತದೆ—ಕಾಗದ, ಬಟ್ಟೆ ಹರಿದ ಹಾಗೆ.

ಎರಡು: ಈ ಪದ್ಯಗಳ ಪ್ರಾಕೃತ ಏನಾದರೂ ತೊಂದರೆಕೊಟ್ಟರೆ, ಪುಸ್ತಕದ ಕೊನೆಯಲ್ಲಿರುವ "ನಾಗನ ಕನ್ನಡಕ್ಕೆ ಕನ್ನಡಿ" ಎಂಬ 'ಛಾಯಾವಿಭಾಗ'ವನ್ನು ನೆರವಿಗೆ ಕರೆದುಕೊಳ್ಳಬಹುದು.

ಇತಿ ಶಂ, ಅಥವಾ ಅಲಂ.

“ ಕೊರವಂಜಿ ”

ಮಾಸಪತ್ರಿಕೆಯ ಸಂಪಾದಕರಾದ

“ ರಾ. ಶಿ. ”

ಅವರಿಗೆ

ವಿವರ

ನಾಗನ ಪದಗಳು

೧. ನಾ ನಾಗಮುತ್ತು

ನಾ ನಾಗಮುತ್ತು!
ಶಾನೆ ದಿವಸಾಗಿತ್ತು
ಯಿಂಗೆ ನಾ ಯೆಡೆನೆತ್ತಿ ನಿತ್ತು! ೧

ಮೊನ್ನೆ ಏನಾಯ್ತು:
ನಾ—ನನ್ನ ಪಾಡಿಗೆ ನನ್ನ ಹುತ್ತ
ಅಂತ, ನನ ಮೈನ ತಲೆಸುತ್ತ
ಸುತ್ತಿಕೊಂಡ್ ಇದ್ರೆ—ನಿದ್ದೆಮಾಡುತ್ತ . . . ೨

ಬತ್ತಪ್ಪ ಒಂದು—ಎಳೆಯ ನಾಗರ; ಅಲ್ಲ—ಒಳ್ಳೆ;
ಆವುಗಳ ಗುಂಪಲ್ಲಿ ಅದೆ ನೀರಗುಳ್ಳೆ;
ವಾಷಣೆ—ತಿಂದಂಗೆ ಅಶಿಅಶೀ ಕಳ್ಳೆ;
ನನಗೆ ಅಳಿ ವಾಸುಕಿಗೆ ಯೇಳಿತು: "ಏ ಜಳ್ಳೆ!
"ಮುಗಧೋಯ್ತು ನಿಮ್ಮ ಕಾಲ!
"ಯೀಗೆಲ್ಲ ಪ್ರಗತಿ! ನಾವದರ ಬಾಲ!
"ಮುಂದೆ ಅದೆ ಮುದುಕಿ ಅಬ್ಬ!
"ಬಾಲದಾಚೇ ಯೆಡೆನ ವೊತ್ತು ತರೊ ಗಬ್ಬ!" ೩

ಮನಗಿ ಯಿದ್ದಂಗೇ
ಅನ್ನಿಸ್ತು ನಂಗೆ:
"ನಾ ಕಾಣೆನೇ ಸೀವು ವೊತ್ತು ತರೊ ಗಬ್ಬ?
"ಮೂರು ನಿಮಿಸದ ಸದ್ದು—ಕತ್ತೆಬಾಲದ ಡಬ್ಬ!
"ಮಂತ್ರಕಿಂತ್ ವುಗಳೆಚ್ಚು! ತೊಳಿರ್ ಆಕಿ ಸಬ್ಬ!"
ಅನ್ನಿಸ್ತು ನಂಗೆ
ಮನಗಿ ಯಿದ್ದಂಗೆ. ೪

ಬಿಡನಿಲ್ಲ ಒಳ್ಳೆ
ನನ್ನ—ಆ ಸೊಳ್ಳೆ!
ವುತ್ತದಾಗ್ ಕೋಲಾಕಿ ಚುಚ್ಚಿತು, ತಿವೀತು.
ವುತ್ತ ಮುರಕೊಂಡ್ ಅದರ ಮಣ್ ಮೇಲ್ ಕವೀತು.
ಉಸಿರಂಗೆ ಸಿಕ್ಕಿ
ನಾಲಗೆನ ನೆಕ್ಕಿ
ಯೆಡೆನೆತ್ತಿ ವೈ ಬಿಚ್ಚಿ ಗಟ ವೊರಗೆ ಬತ್ತು!
ಬತ್ತೊ ಇಲ್ಲೋ—ಒಳ್ಳೆ ವೋಯ್ತು ಓಟ ಕಿತ್ತು! ೫

"ಏ ಒಳ್ಳೆ! ಗುಬ್ಬಿ!
"ಬಾ! ನಿನ್ನ ರುಬ್ಬಿ
"ವುಯಿದು ತಿನ್ನುವೆ, ಮಾಡಿ ಕಾವಲೀ ದೋಸೆ!
"ಅಬ್ಬ! ಯಳದಾಡುತೀ ನನ್ನ ಅಳೆವುಲೀ ಮೀಸೆ!" ೬

ನಂಗೊ ಬಲೆ ಕ್ವಾಪ!
ಯಾರೊ ಅಂದರು: "ಪಾಪ!
"ಬುದ್ದಿ ಬಲಿಯದ ಯೀಚು. ಅದಕನಕ ವುಚ್ಚು.
"ನೀವ್ ಗೋದಿ—ಸುಲಬದಾಗ್ ಆಗ್‌ಬಾರ್ದು ನುಚ್ಚು.

“ಯೆಂಗಾರೆ ಬಂದೀರಿ! ಸಿಕ್ಕಿಸಿರಿ ಕುಚ್ಚು!
“ಮಾರುಕಟ್ಟೆಗೆ ಬಂದ ಮ್ಯಾಕ್ ಯಾಕೆ ಮರೆಮುಚ್ಚು?
“ಕಟ್ಟೆ ಗೆಜ್ಜೆ!
“ಆಕಿ ಯೆಜ್ಜೆ!
“ನೋಡುವ—ಮತ್ತೊಮ್ಮೆ ನಿಮ ನಾಗನೃತ್ಯ!
“ಆಗಲಿ, ವೋಗಲಿ—ನೀವು ಕೃತಕೃತ್ಯ!” ೭

ಮುಂದೆ ಅದೆ—ಅತ್ತಾರು
ನನ ಅಜ್ಜೆ ಗುರುತು.
ಅನಸುತ್ತೆ: ವೋಗಿಲ್ಲ
ಇನ ತೀರ ಮರತು. ೮

೨. ಬಂದೀಯು ಗೆಣೆಯ

ಅದಿನಾರು ವೇಲಾಯ್ತು ವರುಸವಗ್ನಾತ;
ಅಂಟಕೊಂಡೈತ್ ಇನ್ನ ಒಸಿ ಅಳೀ ನಾತ;
ಬಂದೀಯ ಗೆಣೆಯ ನೀ ನನ್ನ ಸಂಗಾತ?
ಯೇಳೊದ್ ಒಂದ್ ಈಟೈತೆ ಭೋ ಗುಟ್ಟುವಾತ. ೧

ಯಿಂದಿನಂಗ್ ಈಗ ನಾ ವೊರೊಕಿಲ್ಲ ಮಕ್ಕ್ರಿ;
ವೋಯ್ತು —ಆ ಕಾಲೆಲ್ಲ— ದಿನಗೂಲಿ ಚಾಕ್ಕ್ರಿ;
ಯೆಪ್ಪುವೊಸರ್ ಆಕಿದಾ ದಾರ್‌ವಾಡ ಬಕ್ಕ್ರೀ—
ನನ್ನ ಕೈನಾಗಿರೋ ಸರಕಾರಿ ನೋಕ್ಕ್ರೀ! ೨

ಯೆಬ್ಬೆಟ್ ಒತ್ತಾಕಿಲ್ಲ ನಾನೀಗ—ಮಸ್ತಾ
ವೋದು ಬರ ಕಲಿತಿವ್ನಿ — ನಾ ಅಕ್ಸರಸ್ತ!
ಕೂಲಿಮಟ ಮಿಡಿಲಿಸ್ಕೂಲ್ ಮುಗಿಸಿ ಪೊಗದಸ್ತ
ನನ್ನೋಳು, ನಂಗುನೂ ಯಿಡಿಸಿದಳು ಪುಸ್ತ. ೩

ಮದಿವ್‌ಯಾಯ್ತು—ಮನೆನೇ ಮಟವಾಯ್ತು ನನಗೆ.
ಯೇಣ್ತಿ ಕಲಿಸಿದ ವೋದೆ ನನ ಮೆದುಳು ತೆನೆಗೆ
ರಸ ತುಂಬಿ ವೊಡೆ ಬಲಿತರೇನ್ ನಂಗೆ ಗುನುಗೆ?
ಯೆಜಮಾನ ಯಿಂಗ್‌ನಾನು ನನ್ ಯೇಣ್ತಿಮನೆಗೆ! ೪

ವೋಗಿಲ್ಲ ಅಳದು, ಯಿಡಿದಿಲ್ಲ ವೊಸದು;
ಕನಡ ನಂದ್ ಯಿಂಗಾಗಿ ಎಳ್ಡು ಕಡೆ ಮಸದು—
ಬಂದಂಗ್ ಆಡ್ತೀನಿ; ಅದ ಬರಿತಿನೆಂಗೆಂಗೋ!
ಯೆತ್ರೋರ್ ಯೆಗ್ಗದ ಕತೆನೆ ಈಯೆಲ್ಲ ನಂಗೋ! ೫

೩. ನಲ್ಲೀ ತಾವ್ ನಂ ಮಲ್ಲೀ

ಬೇಲೂರ್ ಗುಡಿಯಾಗ್ ಕನಡಿ ಕೈಯಿನ್
ಯಿಗ್ರಾ ಯಿಲ್ವಾ ಅಲ್ಲಿ—
ಅಂಗೇ ಕೈನಾಗ್ ಚೌರ್ಗ ಯಿಡಕಂಡ್
ನಲ್ಲೀ ತಾವ್ ನಂ ಮಲ್ಲೀ! ೧

ಬಣ್ಣಾನೂ ಒಸಿ ಅಂಗೇನೇವಾ!
ಅಂಗೇನೆ ಎದೆಬಾವ!
ಮಲ್ಲಿ ಯಾರಾ? ಯಾಕ್—ಅವರಪ್ಪ
ಯೆಣ್‌ಕೊಟ್ ನಂಗೆ, ಮಾವ! ೨

ಅವರ ಅಪ್ಪಂಗ್ ಅವಳ್ ಜೀವದ್ ಜೀವ
ಅವರ್ ಅಮ್ಮಂಗ್ ಅವಳ್ ಕಣ್ಣು!
ನಂಗನಕಾ—ಓ! ಏನ್ ಎಂಗ್ ಯೇಳ್ಲಿ!
ಬಾದಾಂ ಮಾವೀನಣ್ಣು! ೩

ಮಿಕ್ಕೋರ್ ಯಾರಾರ್ 'ಮಲ್ಲೀಂ'ತಂದ್ರೆ
ಅಲ್ ಉದುರಿಸ್‌ಬುಟ್ಟಾಳು!
ನಾನ್ ಅನಬೈದು—ನಂಗ್ ಅವಳ್ ಯೆಂಡ್ರು!
ಸಲ್ಗೆ—ನಂಗೆ ಏನ್ ಯೇಳು! ೪

ಮಲ್ಲಪ್ಪನ್ ನಾನ್ ಮೊದಲ್ ನೋಡಿದ್ ನಂ
ಪ್ಯಾಟೆ ನಲ್ಲೀ ತಾವ;
ಅವಳ್ಗೂನೂ ಯಿಂಗ್ ಅನ್ನಿಸ್ತಂತೆ:
"ಇವನ್ ಯಾರ್ ಯಿಂಗ್ ನೋಡಾವ?" ೫

ಮಲ್ಲಮ್ಮಂಗೂ ನನ್ ತಂಗೀಗೂ
ನಲ್ಲೀ ನ್ಯಾಸ್ತ ಬಾಳ.
ಮೀನ್ ಯಿಡಿದಂಗ್ ನನ್ ಯಿಡಿದಾಕ್‌ಬುಡ್ತು
ಮಲ್ಲೀ ಎಸದಿದ್ ಗಾಳ! ೬

ಮೂರ್ ಉಟ್ಟೋವೆ ಮಕ್ಕಳ್ ನಮ್ಗೆ—
ಗಂಡ್ ಎಳ್ಡ್ ಒಂದೇ ಯೆಣ್ಣು;
ಆದ್ರೂ ಮಲ್ಲೀ ನೀರ್ಗ್ ಒಂಟ್ಬೊಂದ್ರೆ
ಅತ್ತಾಗೇ ನನ್ ಕಣ್ಣು! ೭

ನಿಂತ್ರೊಂಚಂದ! ಕುಂತ್ರೊಂಚಂದ!
ನಡಿತಾನಿದ್ರೆ ಒಂಚಂದ!
ಮಲ್ಲಿ ಚೌರ್ಗೆ ಬೆಳಗೋದ್ ಚಂದ!
ನೀರ್ ತುಂಬೋದೂ ಚಂದ! ೮

ತುಂಬಿದ್ ಚೌರ್ಗೇನ್ ವೂ ಎತ್‌ದಂಗೆ
ಸೊಂಟ್ದಾಗ್ ಸಿಕ್ಸೋದ್ ಚಂದ!
ನಿರೀನ್ ಇಂಕ್ರ ನೆನಸದಂಗೇನೇ
ಚಿಮ್ತಾ ಬರೋದೆ ಚಂದ! ೯

ನೀರ್ ಎಸ್ಟ್ ವೊತ್ರೂ—ಬಾಬಯ್ನಾಣೆ—
ತೋಳ್ ತೊಡೆ ನಡಗಾಕಿಲ್ಲ.
ಎಳ್ಡ್ ಅನಿ ಬೆಮರು ಬಂದ್ರೇನ್ ಯೀಗ —
ಕುಂಕ್ಮ ಕದರಾಕಿಲ್ಲ. ೧೦

ನಲ್ಲೀ ತಾವ್ ಯಾರ್ ರಾಂಗ್ ಮಾತಿಲ್ಲ
ಮಲ್ಲೀ ಅಲ್ಲಿರೊಗಂಟ!
ಮರ್ವಾದೀಗ್ ಅವಳ್ ಮೇಲ್‌ಪಂಕ್ತೀನೆ—
ಮಿಕ್ಕ್ಯೋರ್ ತಪ್ಪಾಕ್ ಉಂಟ? ೧೧

ಮಕ್ಕಳ್ ಬಂದ್ರೆ, ಅಸ ಕರ ಬಂದ್ರೆ,
ಅವಕೇ ಮೊದಲಿನ್ ಪಂಕ್ತಿ;
ಮತ್ ಬರಬೇಕು ಮುದುಕೀರ್ ಪಾಳಿ—
ಇದು ನಂ ಮಲ್ಲೀ ಸಂಗ್ತಿ. ೧೨

ನಲ್ಲೀ ನೀರ್ಗೆ ನೂಕ್ ನುಗ್ಲ್ ಉಂಟ?
ಬಾಯ್‌ಜೋರ್ ಮಾಡಾಕ್ ಉಂಟ?
ಸಾಲಾಗ್ ನಿಲ್ಬೇಕ್ ಸಿಪಾಯ್ ನಿಂತಂಗೆ—
ಚೌರ್ಗೆ ತುಂಬೋಗಂಟ! ೧೩

ನಲ್ಲೀ ನೀರೀಗ್ ಬಂದೋರ್ ಅಲ್ಲಿದು
ಲಾಲ್‌ಬಾಗಿನ್ದು ಪರಿಸೆ!
ಒಂದೇ ಮನೆಯೋರ್ ಬಿಂದ್ಗೆ ತಂದಂಗ್!
ಅದ್ದು—ಮಲ್ಲಿ ವರಿಸೆ! ೧೪

ಒಂದೊಂದಲ್ಲ ನಲ್ಲಿ ತಾವ್ ನಂ
ಮಲ್ಲೀ ಆಡೋ ಆಟ
ಬಾಲಾನ್ ಯಾರೂ ಬಿಚುವಂಗ್ ಇಲ್ಲ
ಮಲ್ಲಮ್ಮನ್ ಸಂಗಾಟ ೧೫

ಮಲ್ಲಮ್ಮ— ನನ್ ಮಕ್ಕಳ್ ತಾಯಿ!
ಮಲ್ಲೀ—ನಂಗ್ ಅವಳ್ ಯೆಂಡ್ರು!
ನಂ ಪ್ಯಾಟೀಗ್ ಅವಳೇ ಪಾಳೇಗಾತಿ!
ಯಿಂತೋಳನ್ ಯಾರ್ ಕಂಡ್ರು! ೧೬

ಅಣ್ಣಮ್ ತಾಯಿ! ಅಡ್ ಬಿದ್ದೇ—ನನ್
ಯೆಂಡ್ರು ಮಕ್ಳು ಪ್ಯಾಟಿ
ಚೆಂದಾಗಿರ್ಲಿ—ನೋಡ್ಕೊಳ್ಳವ್ವಾ!
ನೀನೇ ನಮ್ಗೆ ಕ್ವಾಟೆ! ೧೭

೪. ನನ್ನ ಯೆಂಡತ್ತಿ

ಮೋಯೀನಿ ಯವತಾರಾನೆತ್ತಿ—ಮಂಕು
ರಾಕ್ಸಸರಿಗೆ ಸೊನ್ನೆ ಸುತ್ತಿ—ದೇವ-
ತೆಗಳಿಗೆ ಅಮ್ರುತದ ಬುತ್ತಿ—ತಂದ
ಮಾದರಿ ಯಾರೇ—ಸೌಟ ಯಿಡಿದೆತ್ತಿ?
ನೀನಲ್ಲವೇ ನನ್ನ ಯೆಂಡತ್ತಿ! ೧

ಕಲ್ ತುಂಬ ರೇಸನ್ ಅಕ್ಯಾಗ—ಅಸೀ
ಸೌದೇದು ವೊಗೆ ಮುತ್ತಿ ಮೂಗ—ಬ್ಯಾಳೆ
ಬೇಯದೆ ಬಾವಿನೀರಾಗ—ಅಡಿಗೆ-
ಮನೆಯೊಳಗ್ಯಾರೇ—ದಿನಕೆರಡು ಸತ್ತಿ?
ನೀನಲ್ಲವೇ ನನ್ನ ಯೆಂಡತ್ತಿ! ೨

ಮನೆ ತುಂಬೊ ಮೂರ್‍ಮಕ್ಕಳ್ ಕೊಟ್ಟು—ತಿದ್ದಿ
ನೇರಮಾಡುತ ಅವರ ಸೊಟ್ಟು—ಬಿಡತ
ಆಗಾಗ ನಂಗೂ ಒಂದ್ ವೊಟ್ಟು—ನೋಡಿ
ಬೀಸುವರ್ ಯಾರೇ ಮಾತೀನ ಕತ್ತಿ?
ನೀನಲ್ಲವೇ ನನ್ನ ಯೆಂಡತ್ತಿ! ೩

ನಗತಿದ್ರೆ ನೀ ರಾಮುನ್‌ಯೆಣ್ಣು—ಕೆಳ್ಳಿ
ಬುಟ್ಟೇಂದ್ರೆ ಬಲಬೀಮುನ್ ಕಣ್ಣು—ಸಡ್ಡೆ
ಮಾಡ್ದಿದ್ರೆ ನಾ ನಿಂಗೆ ಮಣ್ಣು—ಯಿಂಗೆ
ಮೀಟೋರ್ ಯಾರೇ ನಮ್ಮ ಪ್ರೀತಿಯ ಬತ್ತಿ?
ನೀನಲ್ಲವೇ ನನ್ನ ಯೆಂಡತ್ತಿ! ೪

ನೆಗ್ತಿರ್ತಿ ಮಲ್ಗೆವೂನಂಗೆ—ಗದರಿ
ಸಿಡಿಗುಡ್ತಿ ಮಿಂಚು ಗುಡುಗಂಗೆ—ಅಂಗೇ
ತತ್ತ್ರೀಯ ಕಣ್ಣಾಗ ಗಂಗೆ—ಇಂಗ್ನನ್ನ
ಆಡ್ಸೋರ್ ಯಾರೇ ಇಲೀನ್ ಆಡ್ಸೋವಂಗ್ ಕೊತ್ತಿ?
ನೀನಲ್ಲವೇ ನನ್ನ ಯೆಂಡತ್ತಿ! ೫

ಮಾತಾಯಿ! ಮನೆಲಚ್ಮಿ ಮಲ್ಲಿ!—ನೀನೆ
ಕೆಂಪ್ರೊಜ್ರ! ನಿನ ಪಕ್ಕದಲ್ಲಿ—ಬ್ಯಾರೆ
ಯೆಣ್ಣೆಲ್ಲ ನಡರಸ್ತೆ ಜಲ್ಲಿ—ಅನಿಸೀ
ಯಿಡಿದೊರ್ರ್ಯಾರೇ ನನ್ನನ್ ಇಂಗೆ ಮೇಗೆತ್ತಿ?
ನೀನಲ್ಲವೇ ನನ್ನ ಯೆಂಡತ್ತಿ! ೬

೫. ತಿರುಮಂತ್ರ

೧

ಯಾಂಡಲ್ ಯಿಂಗ್ ಯಿಡೀಕ್ಕ!
ಶೀಟ್ ಮ್ಯಾಗ ಮಡೀಕ್ಕ! ೧

ಐ . . . .
ನಾಚ್ಕ್ಯಾಕೆ ಮಲ್ಲಿ ?
ಯಾರೆ ಔರ್ ಇಲ್ಲಿ ?
ತಿಂಗಳ್ ಇದ್ರೇನೇ? ಸುತ್ತೆಲ್ಲ ಮಬ್ಬು.
ಬೇಕಾರೆ ನೀ ನನ್ನ ಯಿಂಗ್ ಇಲ್ಲೆ ತಬ್ಬು
ಪತ್ತೆನ್ ಆಗೊಲ್ಲ!
ನೋಡೊರ್ ಯಾರಿಲ್ಲ! ೨

ಯಿಂಗ್ ಕುಂತರ್ ಎಂಗೆ? ನಾ ಕಲಿಶಿಕೊಡಕ್ ಉಂಟ?
ಯಾಕೆ ಪಿರಕೀ? ನಿಂಗೆ ಸಡಿಲನಾ ಸೊಂಟ?
ನಂಬು—ನಿನ ಪಕದಾಗ ನಾನ್ ಇರೋಗಂಟ—
ಮೀಶೆ ಮ್ಯಾಗ್ ಇಂಗ್ ಕೈಯಿ! ಬೈಸಿಕಲು ಬಂಟ! ೩

ಅಕ್ಕಳಿಸು—ಎಳೆ—ಎಳಕೊ—ವೊಟ್ಟೇ—ವೊಳೀಕೆ!
ಮುಂಬಾರ! ಅಯ್! ಅಸ್ಟು ಬಗ್ಬ್ಯಾಡ್ ಕೆಳೀಕೆ!
ಆ್ಞ! ಅಂಗೆ! ಕುದುರೆ ಮ್ಯಾಗ್ ಶಿಪ್ಪಾಯ್ ಕುಂತಂಗೆ!
ನಡದಿಂದ ಮ್ಯಾಗೆ ಮೈ ಯಿರಬೇಕ್ ನಿಂತಂಗೆ! ೪

ಇಲ್ಲಿ—ಈ ಕಾಲ್ ಇತ್ತ—ಈ ಪ್ಯಡಲ ಮ್ಯಾಗ್ ಆಕು;
ಅಲ್ಲಿ—ಆ ಕಾಲ್ ತತ್ತ—ಆ ಪ್ಯಡಲ ತುಳಿ, ನೂಕು;

ಇದು ಬಿರೇಕ್—ಮುಟ್ಟಬ್ಯಾಡ್ ಇದನ!
ಮುಟ್ಟಿದರೆ ಯಿಕ್ತೈತೆ ಮೊಕ್ಕೆ ಮೂರ್ ಒದೆನ! ೫

ವಾಲ್ಬ್ಯಾಡ ಅಂಗೆ ನನ ವ್ಯಾಗೆ!
ಅದಕೆಲ್ಲ ವೊತ್ತು—ಇಳಿದ ಆ ವ್ಯಾಗೆ! ೬

ಕುಂತೀಯ ಬದ್ರ?
ಕೈಯ ಬಿಡಲೀಯ?
ಬೀಳೊವಂಗಾದ್ರೆ—
ಇಲ್ಲೀವ್ನಿ ಸಾಯ! ೭

ಬಿಡಲಿಯಾ? ಬಿಡತೀನಿ!
ಆ್ಹ! ಇದೋ! ಬಿಟ್ಟೆ! ಬಿಟ್ಟೆ!
ಎಲ ಮಲ್ಲಿ! ಏನೆ ನೀನ್ ಇಂಗ್ ಓಗ್ತಿ
—ವೋಗುವಂಗ್ ಚಿಟ್ಟೆ!
ದುಂಬಿ ವೋದಂಗ್ ಓಗ್ತಿ, ಕಂಬ ಸುತ್ದಂಗ್ ಸುತ್ತ್ತಿ,
ಪ್ಯಡಲ ತುಳಿತುಳಿತಿ, ಸರ್ಕಸೇ ಮಾಡ್ತಿ;
ಯಾಂಡಲೇ ಕೈಬಿಡತಿ, ಆಚೀಚೆಗ್ ಇಂಗ್ ಆಡ್ತಿ;
ಕೈಯ ಕೊಟ್ಟೆಲ್ಲಪ್ಪೋ ನಂಗೆ ನನ್ ಯೆಡ್ತಿ! ೮

೨

"ಸೈಕಲ್ಲ, ಮಾರಾಯ್ತಿ, ಕಲಿಸಿದೋರ್ ಯಾರೇ
ನಿಂಗೆ, ನನ ಗರತಿ?"
"ಪ್ಯಾಟೆ ಅಣದೀರೆಲ್ಲ ಪಾಟ ಯೇಳ್ತಾರೆ
ನಂಗಿಲ್ಲಿ ನೂರಾರು ಸರತಿ." ೯

“ಮತ್ತೇನೆ ಮಡಗೀದಿ—ಬರತನಾಟ್ಯ?
ಚಿಂತಿಲ್ಲ—ಯೇಳು ರಾಸ್ಯ.”
“ಯೇಳೋವ ಕೇಳೋವ ಸಮಯ ಬತ್ತೈತೆ—
ಈಗ ಸಾಕೇಳಿ ಆಸ್ಯ.” ೧೦

“ಬತ್ತೀರ ಒಂದು ಕೈ? ಡಬ್ಬಲ್ ಸವಾರಿ?
ಬಾರ್ ಮ್ಯಾಗೆ? ಊಂರೀ! ನಿಜಾರೀ!”
“ಸದ್ಯ ಕತ್ಲಾಗ್ ಕಳದೆ ನನ್ನ ಮರುವಾದಿ!
ಬರದಿದ್ರೆ ಬಿಟ್ಟಿಯಾ ಬಜಾರಿ!” ೧೧

೬. ಮಕ್ಕಳಿವು ಮೂರು

ವೊಂದು ಬಕಾಸುರ, ವೊಂದು ಯಿಡಿಂಬ,
ತೇಟು ತಾಟಕಿ ವೊಂದನಕ;
ಗೋಳು ವುಯ್ಕೊತವೆ; ಗದರು ಆಕಿದರೆ—
ಸುಂಕೆ ನೋಡ್ತವೆ ಮಕಾಮಕ! ೧

ಆದೀ ಯವಾರ ಅಚ್ಚಿ ಬತ್ತವೆ—
ಸುಮಾರೆ ಆಯ್ತುದೆ ತೆರೋ ರುಣ;
ತಪಸು ಮಾಡಿ ತದುವತ್ತು ತಾಯಿನೇ—
ಎಲ್ಲಿ ಅನಬೆಡಾ ಮಲ್ಲೀಗುಣ! ೨

ಅಸಿಯೊ ಬಿಸಿಯೊ ಏನ್ ಎಂಗೆ ಇರಲಿ—ಸೈ!
ವೊಂದು ಬುಟ್ಟು—ಅದು ಮಾಂಸ—
ದೊಡ್ಡೋನ್ ಒಟ್ಟೆ ಏನ್ ಅಗಸರ್ ಒಲೆಯೊ ಕಾಣೆ—
ಕಂಡದ್ದೆಲ್ಲ ಛಟ್ಟು! ಥೊಂಸ! ೩

ಅವನ ತಮ್ಮ ಬಲೆ ಕಳ್ಳಕೊರಮ! ತಾ
ಯಾವುದಕ್ಕು ಸಿಕದೀರ
ತಂಗೀನ್ ಕಳಿಸ್ತಾನೆ ತಲಾಷ್ ಮಾಡಾಕೆ!
ಭೂಪ ಅಂದ್ರೆ ಇವ! ಧೀರ! ೪

ಇವನ ಸೇರಿಗದು ಸೇರೂಕಾಲು!
‘ನೂಲಿನಂತೆ ಶಾಲೆ’—ಗಾದೆ!
ತಮ್ಮಸ್ಟಕ್ಕೆ ತಾವ್ ವುಡುಗರೋಯ್ತಿದ್ರವ್ಕೆ
ಯೆಣ್ಣಿವ್ಳಿಂದ ಬಲು ಬಾದೆ! ೫

ಮತ್ತೆ, ಸಿವನೆ ಬಲ್ಲ—ಯೇನ್ ಎಂಗೈತೋ
ಅದರದು ಮನಸಿನ್ ಇರಾದೆ?
ತಿಂಡಿ ಕೈಯವರ ಕಂಡರ್ ಅದ್ ಯೋಳ್ತದೆ:
'ನೀನೆ ಕೃಷ್ಣ! ನಾನೆ ರಾದೆ!' ೬

ವೊಳ್ಳೆ ಮಾತಾಗ್ ಅವೇ ಕೊಟ್ರೆ ಸರೋಯ್ತು;
ಕೊಡದಿದ್ರೆ ಅವ್ಕೆ ಗತಿ—ಬೇಡ!
ಅಣ್ಣ ಯೆರಡು ವೊಂದು ತಂಗಿ ಸೇರಿಕೊಂಡು
ತೀರೀಸ್ಕೋಂತವೇ ಸೇಡ! ೭

ರೋಪು ರಂಬಾಟ ಜರುಬು ದಬಾವ್ನೆ
ಕೇರೀನೆ ನಡುಗಿಸೊ ಗತ್ತು
ಮಲ್ಲೀಗೆಂಗೊ ಅವಳ್ ಮಕ್ಕಳ್ಗೂ ಅಂಗೇ!
ನನಗದೆ ತ್ರಾಣ, ತಾಕತ್ತು! ೮

೭. ಪ್ರಸ್ನೆ—ಉತ್ರ

“ಅಪ್ಪಾ, ನಾಕಾಣೆ ?”
“ಯಾತ್ಕೋ ಪುಟಾಣಿ!”
“ಯೇರ್—ಕಟಿಂಗ್—ಶಿಲೂನ್!”
“ಕಾಸೂ ನಂಗ್ ಆರು ?”
“ಯಾತ್ಕೇ ಬಂಗಾರು?”
“ಕೊಂಡ್‌ಕೊಳ್ಳೋಕ್ ಬಲೂನ್!” ೧

“ನಿಂಗೋ ಸುನಸ್ಸೇಪ ?”
“ನಂಗ್ ವೊಂದ್ ವೊಸಾ ತೋಪಿ.”
“ಯಾರಿಗ್ ಆಕಾಕ್ಕೆ ?”
“ನಿಂಗ್ ಏನ್ ಬೇಕೆ ವುಡುಗಿ ?”
“ಅದ್‌ನೈದ್ ತಗದಂಗ್ ಮಡಗಿ!”
“ಆಕ್ದೆ ನಂಗೆ ಕೊಕ್ಕೆ!” ೨

೮. ತುಳಸೀಪೂಜೆ

ಮನೆ ಮುಂದೆ ತುಳಸಿಕಟ್ಟೆ!
ಕೈಲಿ ಯಿತ್ತಾಳಿ ತಟ್ಟೆ!
ಪಂಚ್ವಾಳ ಊವ—ಅಣ್ಣು ಕರ್ಪೂರ!
ತಾನ ಮಾಡಿದ ತಲೆ ತೊಟ್ಟಿಕ್ತ ನೀರ!
ಅರಿಷಿಣದ ಕೆನ್ನೆ, ಕುಂಕ್ಮ ಅಣೆನಲ್ಲಿ!
ಗಾಜುಬಳೆ ಗಲಿಗಲಿ! ಬತ್ತಂದ್ರೆ ಮಲ್ಲಿ—
ಕೊಳ್ಳ ಕರಿಮಣಿ, ಅದರ ನಡು ಚಿಕ್ಕ ಬಟ್ಟು—
ಬೈಸಾರಿ ಮುಕ ತೊಳೆದ ಕಣ್ಣಿಗೊಬ್ಬಟ್ಟು! ೧

ಅಚ್ಚಿ ಅರಿಷಿಣ, ಇಕ್ಕಿ ಕುಂಕಮ, ಮುಡಿಸಿ ಗೆಜ್ಜಸ್ತ್ರ,
ಊವನ್ ಒಪ್ಪಿಸಿ, ಅಚ್ಚಿ ಕರ್ಪೂರಗಳ ಸುಸೂತ್ರ,
ತೊಟ್ಟ ಚಿವುಟಿ ಎಲೆಗೆ ಅಣ್ಣಿಗೆ, ನೀರ ಯೆರೆದೆತ್ತಿ,
ಮೂರು ಸಲ ನೈಯಡಗಿ ಬರುವಳು ಕಟ್ಟೆಯನು ಸುತ್ತಿ. ೨

“ಬುದ್ಧಿ ಕೊಡು ತುಳಸಿ
ಮನೆಯ ಗಂಡಸಿಗೆ;
ಯಿದ್ದೆ ಕೊಡು ಕಲಿಸಿ
ಮೂರು ಅಸುಗೂಸ್ಗೆ;
ನಂಗೆ ಮಾತಾಯಿ—
ಕೊಡು ಮೊದಲು ಬಕ್ತಿ!
ಮತ್ತೆ ಕೊಡು ಸಕ್ತಿ!
ಕಡೆಗೆ ಕೊಡು ಮುಕ್ತಿ!
ಕೊಟ್ಟು ನೀ ಕಾಯಿ!” ೩

ಮುಂಡಿಯೂರಿ, ನಡ ಬಗ್ಗಿಸಿ, ನೆಲಕೆ ಅಣೇನಿಕ್ಕಿ
ಏಳೊ ವೇಳೆ ಕಾದಿರತವೆ—ವೊಂಚಿದಂಗೆ ಅಕ್ಕಿ—
ಮೂರೂ ಕೂಡಿ ಪೂರ್ವಸುಕ್ರ್ರುತ ಅಂತ ಗಂಡು ಯೆಣ್ಣು!
ನಗತ ನಗ್ತಾ ಕಿತ್ಕೋಂತವೆ ತಾಯಿ ಕೊಡೋ ಅಣ್ಣು! ೪

ತುಳಸೀಪೂಜೆ ಮಲ್ಲೀಗನಕ
ಸೀ—ಸಿಗಿದಂಗೆ ಕಬ್ಬ!
ಮಕ್ಕಳ್ಗನಕ ದಿನ ಬೆಳಗಾದ್ರೆ
ಅಣ್ಣೂ ಕಾಯೀನ್ ಅಬ್ಬ!
ಇವರಬ್ಬಾನೂ ಅವಳ್‌ಕಬ್ಬೂನೂ
ತುಂಬೋಕ್ ನನ್ ಕಣ್ ಡಬ್ಬ!
ತಗ್ ಬೀಳ್ದಂಗ್ ಇಂಗೇನೆ ಬೆಳೀಲಿ
ಮೂವ್ರೋರ್ ಮನಸೀನ್ ದಿಬ್ಬ! ೫

೯. ಆಲು—ಕೆನೆ

ಆಚೆ ಜೆಡೆ, ಈಚೆ ಜೆಡೆ,
  ನಡಿವೆ ಊವ್ನ ಶೇತವೆ!
ಅಕ್ಕ ತಂಗಿ ಕುಂತಂಗೆನೆ
  ಕಟ್ಟೆ ಮ್ಯಾಗೆ ಕೂತವೆ! ೧

ಯೀಚಿಗೊಂದು—ನನ್ ವುಡುಗಿ,
  ಆಚೆ—ಆಚೆ ಮನೇದು;
ಜೋಡಿ ಊವ ಯಿದ್ದಂಗೆನೆ—
  ಒಂದೆ ಕೊಂಬೆ ಕೊನೇದು! ೨

ವುರಿಬಟಾಣಿ ಶಿಪ್ಪೆ ಸುಲಿದು
  ಬಾಯಿಗ್ ಎಸಕೊತ—
ಯಿದ್ಕಿದ್ದಂಗೇ ಜಗಳ ಸುರು:
  "ನಂದು! ನಂದ್ ತತ್ತ!" ೩

ಯಿಡಿದ್ ಯೆಳದು ತಳ್ಳಿ ಪರಚಿ—
  ವೊಂದೆ ಕಾಳೆ ಕಾರಣ!
ಕಿರಿಚತಾವೆ: "ನಿನ್ನ ಶಿಗದು
  ಕಟ್ಟ್ತೀನಿ ತ್ವಾರಣ!" ೪

ಊವ ಕಿತ್ತಿ, ಮಣ್ ಯೆರಚಿ,
  ವೊಂದೊಂದರ ರಿಬ್ಬನ
ಶೀಳಿ, ಯೇಳತಾವೆ: "ನಿಂಗೆ
  ಯಿಳಸತೀನಿ ಕೊಬ್ಬ್ನ!" ೫

ವುರಿ ಬಟಾಣಿ ಯೆರಚಿ ಚೆಲ್ಲಿ
ಬೀದಿ ತುಂಬ ಗದ್ದಲ!
ವೊಂದನೊಂದು ಚೆಚ್ಚತಾವೆ—
ಎಳ್ಡು ಬೆನ್ನು ಮದ್ದಲ! ೬

“ಅಮ್ಮಾ! ಅಮ್ಮಾ!” ಅರಚತಾವೆ;
ಕಿವಿ ಕಿತ್ತುವೋಗುದೆ!
ಯಿದಕೆ ನಮ್ಮ ಕೇರಿ ರೂಡಿ—
ಸುಂಕೆ ಕಿವುಡರಾಗುದೆ! ೭

ಅವವೇನೇ ವೊಡದು ಬಡದು
ಅತ್ತು ನಿಮಿಸದೊತ್ತಿಗೆ
ಜೆಡೆ ರಿಬ್ಬನ ತಿದ್ದಿ ಕಟ್ಟಿ
ವೊಂದಾಗ್ತವೆ ಮೆತ್ತಗೆ! ೮

ಅತ್ತು ನಿಮಿಸ ಭೋ ಯವಾರ!
ಮತ್ತೆ ಮೊದಲಿನಂಗೆನೆ!
ಕಾದು ಕುದಿದು ಕಟ್ಟುವಂಗೆ
ಆಲಮ್ಯಾಗೆ ಶೀ ಕೆನೆ! ೯

ಯೀಗ ಶಿಕೆ, ಮತ್ತೆ ತಂಪು
ಚಕ್ಕ್ರ ತಿರುಗೊ ಮಾದರಿ
ವೊದ್ದಾಡ್ತವೆ, ಮುದ್ದಾಡ್ತವೆ
ಅವಳಿ ಜವಳಿ ಕುರಿಮರಿ! ೧೦

ಯಿಂಗೇ ದಿನಾ ಬಲೆ ಚೆಂದ—
  ಕಾಸೆ ಕೊಡದೆ ನಾಟಕ !
ಮಕ್ಕಳಿವೇ ಜೀವದ್ ಊವ
  ನಮ್ಮ ಕೇರಿ ತ್ವಾಟಕ! ೧೧

೧೦. ಶಿನಿಮಾವಾಲೀ

ಆಗಾಕಿಲ್ಲ ಮಲ್ಲೀ—
ನನ್ ಕೈಲ್ ಆಗಾಕಿಲ್ಲ ಮಲ್ಲೀ
ಯೆಂಡ್ರು ನಿನ್ನ ನಾ ಕಟ್ಟಕೊಂಡು ಸೀಸೋದು
ಆಗಾಕಿಲ್ಲ ಮಲ್ಲೀ ೧

ವಾರಕ್ ಇಂಗೆ ನಿಂಗ್ ಐದು ಶಿನೇಮಾ
ಅಸ್ಟೂ ರಾತ್ರೆ ನಂಗೆ ತಂಗಳ ನೇಮಾ
ತಿಂದದ್ ಎಲ್ಲ ವೊಟ್ಟೆಬೂದಿಲಿ ವೋಮ
ವೊತ್ತಸ್ತೈತೆ ಕಣು ತುಂಬುತ ತೇಮ ೨

ವೊಂಟೆಬಡಕನಾ ಸುಂಟರಗಾಳಿ
ಬದುಕು ರೂಡಿಯಿಲ್ಲ ನನಗಾ ಚಾಳಿ;
ವಾರಕ್ ಐದು ಷೋ! ನಾನು ದಿವಾಳಿ!
ಯೆಲ್ಲಿ ಕಲಿತೆಯೇ ಇದ ನೀ ಮನಾಳಿ! ೩

ಚೆಡ್ಡಿ ನೋಡು ನಿನ್ನ ಚಿಕ್ಕಮಗಂದು;
ದೊಡ್ಡೋನದರಾಗ್ ಏನ್ ಕಡಿಮಿಲ್ಲ ಸಂದು;
ಮಗಳ ಲಂಗನಾರೆ ನೋಡ್‌ಬಾರ್ದ ಬಂದು;
ಶಿನಿಮಾಗ್ ಯೆಲ್ಲಿ ನಾ ಸುರಿಯಲೆ ತಂದು ? ೪

ಗಂಟೆ ಗಂಟೆ ಆ ಕ್ಯೂನಲಿ ಕಾದು
ಮುಕದ ಬಣ್ಣ ನೋಡು—ಅಪ್ಪಾ ಸಾದು!
ಜೇಡನ ಬಲೆ ನೊಣ—ಶಿನಿಮಾ ಜಾದು!
ವೋಗಬ್ಯಾಡ ಮಲ್ಲಿ ಆ ಆದಿ ಅದು! ೫

ದಾಸನಾಗಿ ನಾ ದರಿಶಿ ದವಾಲಿ
ನಿನ್ನ ಯಿಂದೆ ಮುಂದೆ—ಶಿನಿಮಾವಾಲೀ!
ಯಾವ ಗಳಿಗೆಲೋ ಕಟ್ಟಿದೆ ತಾಲಿ;
ನನ್ನ ಜೀವ, ಯೆಣ್ಣೆ, ನಿಂಗೇ ಅವಾಲಿ! ೬

೧೧. ಊರಿನಾಚೆಗೋಗಿ

ಕೈಕೂಸನ ಸೊಂಟದಾಗ
ಸಿಕ್ಕಿಸಿಕೊ ಯೆತ್ತಿ;
ನಡಕಲವಗೆ ನನ ಯೆಗಲು;
ಯಿಡಿದುಕೊಳೊ ನೆತ್ತಿ! ೧

ಯಿರೇ ಮಗ ರುಸ್ತುಮ್ಮಣ್ಣ!
ಯೆಜ್ಜೆ ವ್ಯಾಗೆ ಯೆಜ್ಜೆ
ನಡದಾಂದರೆ—ಜಗ್ಗ ತೈತೆ
ಚೆಡ್ಡಿನಾಚೆ ಬೊಜ್ಜೆ! ೨

ಅಸಮುಗೀಗೆ ಅಲು—ಯಿಕಾ—
ತುಂಬಿ ಗಾಜುಬುಡ್ಡಿ!
ಅಂಟು—ತಲೆಗೆ ವೊರಸೀಯ!
ತಕಾ—ಸಕರೆ ಕಡ್ಡಿ! ೩

ಯಿಡಿದುಕೊ ಬಾ ಮರಿಗಣಪ—
ಯಿದ—ತಿಂಡಿಗಂಟ!
ದವಡೆಯಾಗ ವೊತ್ತರಿಶಿಕ
ಯೀ ಪಪ್ಪರಮೆಂಟ! ೪

ನಡಿಲಿ ರತ ನೇರಾಗೀ—
ನಾನು ನೀನು ಚಕ್ಕರ!
ಸಾರತಿ ನೀ ಮುಂದಾಗಡೆ!
ಯೆಲ್ಲಿ ನೋಡ್ರಿ—ಬಕ್ಕರ! ೫

ನಡಾರಸ್ತೆ ನಡೀಬ್ಯಾಡೊ—
   ಕಾರು ಲಾರಿ ಗಾಡಿ!
ಫುಟ್‌ಪಾತ್ ಮ್ಯಾಗ್ ಅಂಗೇನೆ ನೆಡಿ
   ಜನಾ ದನಾ ನೋಡಿ! ೬

ಯೆಲ್‌ಅಂದ್ರ್‌ಅಲ್ಲೆ ಯೆಂಗ್‌ಅಂದ್ರ್‌ಅಂಗೆ
   ವುಗಳು ಶಿಂಬ್ರ ಯೇಶಿಗೆ!
ದನಕೆಂಗೊನೊ ಜನಕಂಗೇ
   ವುಚ್ಚಿದಲ್ಲೆ ಆಶಿಗೆ! ೭

ಅಳೀ ಕತೆ: ದ್ಯಾವರ್ ರತ,
   ಜಾತ್ರಿ, ದಾತ್ರಿಯವನ;
ಕಾಕ್‌ಡ ಬೆಳದು ಮರತೇವೋತು—
   ಪಚ್ಚೆ ಮರಗ ದವನ! ೮

ಅಳ್ಳಿ ವೋತೋ—ಆಳಾಗೋದೊ
   ಪಟಣದ್ ಬಾಯಿಗ್ ಬಿದ್ದು!
ತೇಲ್ತಿರ್‌ಬೇಕ—ಮುಳಗೋಗ್ದಂಗೆ—
   ಯಿಂಗೆದ್ದೊಗೊದೆ ಮದ್ದು! ೯

ಕರಿತಿತೆದೋ—ನೆಲಾಕಾಸಾ
   ಬಯಲು ನೀರು ರುಕ್ಸ!
ಬನ್ನಿ—ಜೀವ ಈಸ್ಕೊಂಡ್ ಬರ್ಲಿ
   ಬವತಿ ಆಕೊ ಬಿಕ್ಸ! ೧೦

೧೨. ಬೆಕ್ ಬಂತು ಬೆಕ್ಕು !

ಕಳಸತಾಳಂತೆ—ಮಗಳ ಕಾಲೇಜಿಗೆ!
“ವೋಗದಿರು ನೀ ಅವಳ ಗೋಜಿಗೆ!”
ಯಿದು ನಂಗೆ ತಾಕೀತು!
ಯಿಂಗೇನೆ ಬೆಳಶಿದರೆ ವುಡಗಿ
ಅಪ್ಪಾಂತ ನಂಗ್ ಅನ್ನ ಮಡಗಿ
ಯಿದು—ಎಂಗೆ ಸಾಕೀತು? ೧

ಬುಡೆ ಬುಡೇ! ‘ಅ ಆಟ’ ಬರಕಿಲ್ಲ ನೆಟ್ಗನ್ನ
ಓದಿ ಬರೆಯಾಕ್ಕೆ!
ಪಾವುಡೇ ಕಟ್ಟೊದ ಕಲಿಶಿಕೊಡು ಮದಲುಗ—
ಕಾಲೆಜ್ ಆ ಮ್ಯಾಕ್ಕೆ! ೨

ಯೇ ಅನ್ನಬಾರ್ದು! ಲೇ ಅನ್ನಬಾರ್ದು! ಅಮ್ಮ ಅನಬೇಕು
ಯೀ ಯಿದನ—ಪುಟ್ಟ ಲಂಕಿಣಿನ!
ಮಕ್ಕಳೀ ವೂವಂತೆ! ಮಾಲಿ ನಾವಂತೆ! ಮನೆ ತ್ವಾಟವಂತೆ!
ಅನಬಾರದಂತೆ ಯೀ ಗಿಣಿನ! ೩

ಬಾ ಗಿಣೀ! ಬಾಮ್ಮ! ಮುದ್‌ರಾಮು! ಮುದ್‌ರಾಮು!
ಬೆಕ್ ಬಂತು ಬೆಕ್ಕು! ಬೆಕ್ಕು!
ಮಲ್ಲಿ ಮೊಕ ಮೊರದಗಲ! ಮನೆ ತುಂಬ ಗದ್ದಲ
ಐವೋರು ನಕ್ಕು ನಕ್ಕು! ೪

೧೩. ಕವಿತಿ ಗುರಾಣಿ

"ಯಾರೇ ನೀನು ? ನನ್ನ ಮಲ್ಲೀ ಮೂಗಿನಂಗೆ
ಮೂಗನಿಟ್ಟುಕೊಂಡು ಮೆರಿತಿ ?"
"ಯಾರಾ ನೀನು ? ನನ್ನ—ಯೆಣ್ಣೆಂಗಿಸನ್ ಯಿಂಗೆ
ನೀನು ತಾನು ಅಂತ ಕರಿತಿ ?" ೧

"ಮತ್ತೆ? ನನ್ನ ಮನೆ ವೊಸಲ ದಾಟಿ, ನೀ
ಯಾರೆ? ಯಾರ ಮನೆ ಗರತಿ ?"
"ಅತ್ತು ವರಸ ನನ್ನ ಮುತ್ತಿನ ಸಂಸಾರ—
ಅವ್ವಾ! ಯೆಸ್ಟು ಬ್ಯಾಗ ಮರತಿ ?" ೨

"ಯೇನೆ ಮಲ್ಲಿ ಇದು ವೊಸ ಅವತಾರ ?
ಸರಟು ಸರಾಯಿನ ಯೇಸ ?"
"ಸರಟು ಅಲ್ಲ, ಯಿದು ಸರಾಯಿ ಅಲ್ಲ;
ನಮ್ದು ಪಂಜಾಬೀ ದೇಸ!" ೩

"ಸರಟು ಅಲ್ಲ, ಕಪ್ಪ; 'ಪಯ್ರನ್' ಅಂತಾರೆ
ಕುಡತ ಯಿದಕ ಆ ಮಂದಿ;
ಯಿದಕ ಸರಾಯ್ಗೆ 'ಸುರುವಾಲ್' ಅಂತ್ತಾರೆ,
ಮತ್ತೆ 'ಗಾಗರ' ಅಂತಂದಿ" ೪

"ವೊಲ್ಲಿ ವೊದ್ದಂಗೇ ಯೆದೆಯ ವ್ಯಾಗೆ ಯಿದು?"
"'ಡಾವಣಿ' ಯಿದು, ಇದು 'ದುಪ್ಪಟ್ಟ'!"
"ಬಲಾ ಮಲ್ಲಿ! ನಿನ ಕನಡ ಮರತುಬಿಡು—
ತೇಟು ಪಂಜಾಬಿನೇ! ಅಪ್ಪಟ್ಟ!" ೫

“ಎಲ್ಲಿ? ತಿರುಗು ಮಲ್ಲಿ! ಎಲ ಎಲ ವುಡುಗಿ!
ಯೆಲ್ಲಿಗ್ ಇಳಿಯತ್ತೈತ್ ಎಳ್ಡು ಜೆಡೆ!
ಕಿಟಕಿ ಬೆಳಕಿನಾಗ್—ನೋಡುವ ಮಲ್ಲಿ—
ಯೆಲ್ಲಿ, ಅತ್ತಾಗಿಂದ್ ಇತ್ತಾಗ್ ನೆಡೆ! ೬

“ಕುಲುಕು ಬಳಕು (ಯಮ್ಮ!) ವೊನಪು ವಯ್ಯಾರ
ಕನಡಿ ಯಿಂದಿನಿಂದ್ ಕಂಡಂಗೆ!
ಅಲೆಯಲೆ ಅಲೆಯಲೆ ತೇಲಿಬತ್ತ್ರದೇ—
ಚೆಂದಾಗ್ ವೊಪ್ಪತ್ತೈತೆ ನಿಂಗೆ! ೭

“ಕಣ್ಣು ಕೆಣಕತದೆ—ನೀ ಯೇನೇ ಯೇಳು—
ಪಂಜಾಬಿ ಬಟ್ಟೆಯ ತರ ಬೇರೆ;
ಅವರಿಗ್ ಅವರದು, ನಮ್ಮದು ನಮುಗೆ
ಗೋರವ—ಅಳ್ಳೀಪ್ಯಾಟಿ ಶೀರೆ. ೮

“ವಳಗೆ ಕುಬಸ, ಬೆನ್ ಮುಚ್ಚುವ ಶೆರಗು,
ಮುಂದೇ—ನಿರಿಯ ಗಗನಚಿಕ್ಕಿ!
ಮಂಗಲಗೌರಿ ಮತ್ತೆ ಮೆರೆದು ಬಾ—
ಚೆಲ್ಲು ವೇಸ ಯಿದ ವಳಗಿಕ್ಕಿ! ೯

“ಕಂಕುಳಡಿಗೆ ನಿನ ಶೆರಗು ಆಯುವಾ
ಬಿಗುಪು—ಸಾಕು ಅದೆ ಜುಮುಜುಮ್ಮು!
ಇಳಿದ ಶೆರಗುಮರೆ ದುಂಡನ್ನ ತೋಳು,
ರವಿಕೆ ರೇಕೆ—ಅದೆ ನಿನ ಹೊಮ್ಮು! ೧೦

“ಯೇನೆ ಮಲ್ಲಿ? ನಮ ಮಗ್ಗ್ಲು ಮನೆಗೆ
ವೊಸದು ಪಂಜಾಬೀ ಸಂಸಾರ—
ಔದು, ಅವಮ್ಮ್ರನ್ ಕೇಳಿ ತಂದೆಯಾ
ಯೀ ವೊಲ್ಲೀ ಸರಟು ಯಿಜಾರ? ೧೧

“ನಿನ್ನ ಶೀರೆ ನೀ ಆಕೆಗ್ ಉಡೀಸು;
ಯಿಂತದ—ಮಡಿಕ್ಕಬೇಡ ಸಾಲ.
ಅಕ್ಕಪಕ್ಕದೋರ್ ಅಕ್ತಂಗೀರಂಗ್
ಇರ್‍ರ್ಲಾ—ಕೆಟ್ಟ್ಹೋಗೈತೆ ಕಾಲ. ೧೨

“ಮತ್ತೆ, ಮಲ್ಲಿ, ನಾ ಯಿಂಗ್ ಯೇಳಿದಕೆ
ಮಾಡಿಕೊಬೇಡ ರೋಸ;
ಯೆಂತದಿರಲಿ ಬಟ್ಟೆ, ಯಿಲದೆ ಯಿರಲಿ—ನೀ
ಯೇನೆ ಮಾಡು—ಅದು ಸಂತೋಸ. ೧೩

“ಯಾಕೇ ಮಲ್ಲಿ? ನಾನ್ ಯೇನ್ ಏಳಿದೆನೇ?
ನನ ಮೂತಿ ಯಾಕೆ ತಿವಿತಿ?
ಗಂಡುಬೀರಿ! ನಿನಗ್ ಎದುರು ಗುರಾಣಿ
ಯಿದು ವೊಂದೇ—ನನ್ನ ಕವಿತಿ!” ೧೪

೧೪. ಅಯಿತ್ವಾರ ಬಂತು

ಬಂತು ಬಂತ್ ಅಯಿತ್ವಾರ ಬಂತು
ಆಯವಾಗಿರಬೈದು ಮನೆಯಾಗ ಕುಂತು ೧

ಕೋಳಿ ಕೂಗಾಕಿಲ್ಲ—ಉರಿನ್ ಆಕಿ ವೊಲೆಗೆ—
ಶಾರೆ ತುಂಬಾ ಯೆಣ್ಣೆ ತಟ್ಟಿ ನನ್ನ ತೆಲೆಗೆ—
ರಪರಪಾ ರಾಚಿದರೆ ಬಿಸಿ ಕುದೀ ನೀರ—
ಬಂದು ಮತ್ತ್ ಮಲಗಿದರೆ—ವಂಬತ್ತು ಪೂರ! ೨

ವಂಬತ್ತು—ಬಿಸಿ ಕಾಪಿ! ಅತ್ತಕ್ ಉಪ್ಪಿಟ್ಟು!
ಅನ್ನೆಳ್ಡಕ್ ಎಸರು ಜೊತೆ ಬಿಸಿ ಮುದ್ದೆಯಿಟ್ಟು!
ಮತ್ತೆ ಮಕ್ಕಳ ಕೂಟೆ, ಅವರ್ ಆಟಪಾಟ!
ದಚಿಬಾರ ವುಲಿಕುರಿ ಮಲ್ಲಿ ಸಂಗಾಟ! ೩

ಸಂಜಿಗ್ ಅಣ್ಣಮ್ಮಂಗೆ ತಟ್ಟೆ ತಂಬಿಟ್ಟು!
ಬಿಕ್ಸದೋರ್ಗ್ ಅದನಲ್ಲೆ ಅಂಚಿ ಯೀಟಿಟ್ಟು!
ರಾತ್ರಿ ಮನೆಯಾಗ್ ಇಡದು ಆರುಮನಿ, ಬಜನೆ!
ನಿದ್ದಿ ಅತ್ತೂಗಂಟ ಕತೆ ಯೇಳೊ ಮಜನೆ! ೪

ಅಯಿತ! ಸುರಿಯಾ! ನಮಗೆ ನೀ ತಂಪುದೀಪ—
ಕತ್ತಲೇನೇ ಯಿರಲಿ ಮಿಕ್ಕ ದಿನ ತಾಪ!
ಈವೊಂದೆ ದಿನನೆ—ನಾ ಬಿಟ್ಟದ್ದೆ ಬಾಣ!
ನಾಳೆಯಿಂದ್ ಎಂಗೂನೆ ಅದೆ ಅಳೇ ಗಾಣ! ೫

೧೫. ಪ್ರಾಯ ತಂದ ವಡವೆ

ನೊದಲು ಕಂಡಾಗ್ ಒಂದ್ ನೊಡವೆಯಿತ್ತು ಮಲ್ಲಿ
ಕೆನ್ನೆ ಮ್ಯಾಗೆ ನಿನ್ನಾ!
ದ್ರುಸ್ಟಿಬೊಟ್ಟಿನಂಗ್ ಇತ್ತದು--ಇನ್ನಾ
ಗ್ಯಪ್ತಿ ಐತೆ ಚಿನ್ನಾ! ೧

ಯಿಲ್ಲೆ ಇತ್ತಾಗ್ ಈ ಕೆನ್ನೆಗುಳಿಯ ಮ್ಯಾಗ್
ಪುಟ್ಟ ಕೆಂಪು ಬುಗುಟು!
ಕೈಯನ್ ಅಂಗ್ಯಾಕೇ ಕೊಸರಿ ಕೊಡವತಿ?
ಜಿಗಟು! ಜಿಗಟು! ಜಿಗಟು! ೨

ಅಳೆಯ ಸಂಗ್ತಿ ನಾನೆಂಗೆ ಮರೆಯಲಿ—
ಮುಕದ ಮುದ್ದು ನೊಡವೆ!
ವಯಸಿಗದೆ, ಮರಿ, ಮಂಗಳ ಲಚ್ಚಣ
ಪ್ರಾಯ ತಂದ ವಡವೆ! ೩

ನಾಚಿಕಾಯ್ತುದಾ? ತಲೆ ಯೆತ್ತು ಮಲ್ಲಿ,
ಮಕ್ಕಳಿಲ್ಲ ಯಿಲ್ಲಿ;
ಆಡಾಕ್ ಓಗವೆ; ನೆಪ್ಪು ಬತ್ತದಾ
ಬೀದೀ ನೀರ ನಲ್ಲಿ? ೪

ಸುರಿಯ ಇಳಿದುಬಂದು ನಿನ ಮುಕ ತಿದ್ದ್ ತಿದ್ದ
ಸವರಿ ಚೆಂಜೆ ಚಿನ್ನ!
ತುಂಬಿ ದುಂಡಗಿತ್ತು ನಿನ ಕೆನ್ನೆ, ಮಲ್ಲಿ,
ಆಗ—ಈಗಿಗಿನ್ನಾ! ೫

ನಿಜವೆ, ಆಗ ನೀ ವುಡಗಿ; ಈಗಲೋ
ಮೂರು ಮಕ್ಕಳ ತಾಯಿ.
ಏನೇ ಆದರೂ ಅಂಗೇ ಕೆಣಕತದೆ
ಕಣ್ಣು ಮೂಗು ಬಾಯಿ! ೬

ಕಣ್ಣ ಯಾಕೆ ಅಂಗ್ ಬಿರಬಿರ ಬಿಡತಿ
ತಗದು ನುಂಗೊವಂಗೆ!
ಕ್ವಾಪಿಸ್ಕಂಡ್ರೆ ನೀ ಭೋ ಮುದ್ದಾಯ್ತಿ—
ಕನಡಿ ನೋಡ್ಕೊ ಅಂಗೇ! ೭

ಇಕಾ, ಮಲ್ಲಿ, ವಸಿ ಎಲಡಿಕೆ—ರಂಗು
ತುಟಿಗೆ ಬರಲಿ—ಕೊಳ್ಳಿ!
ಕುಂಕ್ಮ ತಿದ್ದಿಕೊ; ಕೇಳಿಸ್ತದೆ ಅದೊ
ದೊಡ್ಡಮಗನ ಶಿಳ್ಳೆ! ೮

೧೬. ಮುತ್ತೈದೆ ಸಾವು

೧

ನನ ತಂಗಿ ಮದಿವಿ;
ಮಕ್ಕಳ್ನ ಕರಕೊಂಡಿ
ಮೈಸೂರ ಚಾಮುಂಡಿ
ಬೆಟ್ಟಕ್ ಓಗಿದ್ವಿ. ೧

ಮದಿವ್‌ಯಾದ ಮ್ಯಾಗೆ
ಯಿಳದು ಬರುವಾಗೆ
ಯಿಂಗಂದ್ಲು ಮಲ್ಲಿ
ನನ ಕಿವೀನಲ್ಲಿ:
"ತಾಯಿಪಾದಕೆ ನಾಕು ಊವು
ಆಕಿ ಬರಬೇಕು. ಬನ್ನಿರೀ ನೀವೂ." ೨

ವೋದಿವಿ ಗುಡಿಗೆ;
ಅಮ್‌ನೋರ ಅಡಿಗೆ
ದೇವಿಕೆರೆ ಸಂಪಗೆ ವೊಂದೆಳ್‌ಡು ಪೊಟಣ
ಪೂಜಿಮಾಡಿಶಿ, ಮಲ್ಲಿ ಯೇನೇನೊ ಪಟಣ
ಮಾಡಿದ್ದು ನೋಡಿ,
"ಎಲಾ, ನನ್ನ ಜೋಡಿ
ಕರಕೊಂಡು ಬಂದುದಿಲ್ ಯಾಕೆ?
ಸುಂಕೆ ಯಿಂಗ್ ಕಾವಲ್ ಆಕಾಕೆ?"
ಅಂತ್ ನಂಗ್ ಅನಿಸ್ತು.
ಬ್ಯಾಸರಾ ಮಸ್ತು. ೩

ಬಸವಣ್ಣನನ ಬುಟ್ಟು
ಯಿಳಿವಾಗ ಕೇಳ್ದೆ:
"ನನ ಮಲ್ಲಿ! ಯೇನ್ ಗುಟ್ಟು
ಅಮ್ಮನ್ ಅತ್ರ ಯೇಳ್ದೆ?" ೪

"ಯೆಂಗ್ ಯೆಂಗಸರ ಮಾತು!
ಬಿಡಿ ಗೌರಿದುಕ್ಕ—
ಗಂಡಸರ್‌ಗ್ಯಾಕೆ?
ಕರಕಳೀ ಮುಕ್ಕ!"
"ನಾ ಅರ್ದನಾರಿ! ನಿನ ಗುಟ್ಟ ಬಿಡಿಸ್ ಇಕ್ಕ!"
"ವರ ಕೇಳಿಕೊಂಡ್ ಬಂದೆ—ಒಂದ್ ಸಣ್ಣ, ಚಿಕ್ಕ. ೫

"ಏನು ವರ? ಯಾರಿಗೆ?"
"ನಿಮಗೆ!
"ನನಗೆ!
"ಮತ್ತೆ, ಮಕ್ಕ ಮೂವ್ರೋರಿಗೆ!" ೬

"ನನಗೇನು ಮಲ್ಲಿ?"
"ನಿಮಗೆ ಆಯಸ್ಸು! ನಿಮಗೆ ಆರೋಗ್ಯ!"
"ಮತ್ತೆ ಮಕ್ಕಳಿಗೆ?"
"ಅವಕೆಲ್ಲ—ಗುಣ, ಯಿದ್ದೆ, ಬಾಗ್ಯ!"
"ನಿನಗೆ, ಮಲ್ಲಿ?"
"ನನಗಾ . . . ಮುತ್ತೈದಿ ಸಾವು!"
ಬುಳುಬುಳು ಅಂತು ಮೈ
ಮೇಲೆ ವೋದಂಗೆ ಆವು! ೭

“ಯಿತ್ತ ಬಾ ಮಲ್ಲಿ;
ಕುಂತುಕಾ ಯಿಲ್ಲಿ;
ಮಾತಾಯಿ ತಾವು
ಮುತ್ತೈದಿ ಸಾವು
ಕೇಳಿಕೊಂಡ್ ನಿಂಗೇನೊ ಬಾಯಾಗ ಜೇನು!
ಕಣ್‌ಮುಚ್ಚಿ ನೀ ವೋದೆ—ನನ್ನ ಗತಿಯೇನು?” ೮

೨

ವೊಂದು ಕತೆ, ಕೇಳು:
ರುರು—ಅಂತ, ಆಳು.
ರುಸಿ, ರುಸಿಯ ಮಗ; ರೂಪೊ—ವೋ ಮದನ!
(ಬಾರತದ ಮದಲಾಗ ಯೇಳತಾರ್ ಇದನ!)
ಇವಗ್ ಒಬ್ಬೆ ಯೆಣ್ಣು!
ಯೆಣ್ಣೇನು—ಕಣ್ಣು!
ಅಣೆಗಣ್ಣು ಯಿವಗೆ! ಪ್ರಮದುವತಿ ಔಳ್ ಎಸರು.
ಯಿಂದ್ರನ್ ಯೆಂಗಸರು—ಔಳ್ ಎದುರು ಕೆಸರು.

ರೂಪದಲಿ ರತಿ!
ಗುಣದಾಗ ಪಾರುವತಿ!
ಯಿದ್ದೆಯೋ ಸರಸ್ವೊತಿ!
ಆ ಪ್ರಮದುವತಿ! ೯

ಯಿಂತೋಳ ರುಸಿ ರುರು ಮನಸಾರೆ ಮೆಚ್ಚಿ—
ಯಿನ್ನೇನು ಮದಿವಿ—ಪ್ರಮದುವತಿ ಸತ್ತ್ರಳು, ಆವು ಕಚ್ಚಿ!

ಬ್ಯಾಡ ಗೋಳಾಟ,
ಪಾಪ, ರುರುವಿನದು;
ಅವನ ಸಂಕಟ ಬೆಂಕಿ
ಅಬ್ಬಿ, ಅರಡಿ, ಅದು
ಬೂಮಿನ್ ಆವರಿಶಿ, ಆಕಾಸ ಮುಚ್ಚಿ, ಸೊರ್ಗದಾ ತಾವು
ನಿಂತು, ನಾಲಗೆ ಚಾಚಿ,—ಇಂದ್ರಂಗು ತಟ್ಟತಾ ಕಾವು. ೧೦

ನೋಡಿದ ಇಂದ್ರ!
"ಎಲ ಎಲಾ! ಇವನ್ ಎಣ್ಣ ಆವ್ ಕಚ್ಚಿ ಕೊಂದ್ರೆ—
ನಂಗ್ ಯಾಕೆ ಈ ತಾಪ ತೊಂದ್ರೆ?" ೧೧

ಇಂದ್ರ, ನನ ಮಲ್ಲಿ, ಅವ—ದರ್ಮರಾಜ!
ನಡದೀತು ಎಲ್ಲಿ ಅನ್ಯಾಯ—
ಬೇಡ್ಯಾರು ಯಾರ್ ಎಲ್ಲಿ ಸಾಯ—
ಅಲ್ಲಿ ಅವನಿಗೆ ತಾಪ ತಟ್ಟೋದೆ ಸಾಜ! ೧೨

ಬಂದ ಇಳಿದ್ ಇಂದ್ರ—ರುರು ಇದ್ದ ತಾಕ್ಕೆ.
ಅಂದ: "ರುರು! ನನ್ನ ನೀ ಕರದದ್ದು ಯಾಕೆ?"

"ಪ್ರಮದುವತಿ—ನನ ಜೀವ—ವೋಯ್ತು—ನಾ ಸತ್ತೆ!"
"ಸರಿ; ಅದಕೆ ನಾನ್ ಏನು ಮಾಡೊಕ್ ಆಗುತ್ತೆ?"

"ಮತ್ತೆ ಬದುಕಿಸಿಕೊಡು—ವೋದ ನನ್ ಎಣ್ಣ?"
"ಅದು ಮಾತ್ರ ಆಗಕಿಲ್ ಅಣ್ಣ!"

"ತಡಿಲಾರೆ, ಇಂದ್ರ—ಯೆಣ್ಣ ಕಳಕೊಂಡ ತಾಪ!"
"ಯಿಂಗೆ ಅಟ ಯಿಡಿದೀಂದ್ರೆ—ನಂಗೆ ಬಲೆ ಶ್ಯಾಪ!" ೧೩

ಮರಿಲಾರ, ಪಾಪ, ರುರು
   ತನ ಪ್ರಮದುವತಿನ.
ಇಂದ್ರ, ಎಲ್ಲಾ ಬಲ್ಲ,
   ಇವನ ಆ ವೆತಿನ;
ಇವನ ದುಕ್ಕನ ನೋಡಿ
   ಅವಗೂನು ಕಳ್ಳು
ಕುದಿತ್ತೈತೆ; ಆದರೂ—
   ಇದರಾಗ ಜಳ್ಳು
ಎಸ್ಟ್ ಐತೊ, ಕಾಳ್ ಎಸ್ಟೊ
   —ಇದು ಔನ್ ಪರೀಕ್ಸೆ!
ಮಲ್ಲಿ, ಯಾಕ್ ಬತ್ತೈತೊ
   ಜನಕಿಂತ ಸೀಕ್ಸೇ ?

"ಪ್ರಮದುವತಿಗ್ ಆಯಸ್ಸು
   ಮುಗೀತಪ್ಪ, ರುರು.
ಒಂದ್ ದಫಾ ಮುಗದದ್ದು
   ಮತ್ತೆ ಯೆಂಗೆ ಸುರು ?
ಒಂದ್ ಐತ್ ಉಪಾಯ—ನಿನ
   ಆಯಸಿನಲ್ ಇಸ್ಟ
ನೀ ಕೊಟ್ಟ್ರೆ . . . ಬುಡು ಬುಡು
   ಅದು ಬಲೇ ಕಸ್ಟ!"
   —ಅಂತಂದ ಇಂದ್ರ. ೧೫

ಆಗ, . . . ನೋಡಬಿಟ್ ಚಂದ್ರ
ಚೆಲ್ಲಾ ಕಿಲ್ಲಾ, ಮಲ್ಲಿ, ತಂಪು ತಿಂಗಳನ
ಅಂಗೇನೆ ಬೆಳಗಿಸ್ತ ಮುಖದ ಅಂಗಳನ—

ರುರು ಅಂದ: "ಇಂಗೇ
ಕೇಳ್‌ಬೇಕ ನಂಗೆ?
ಪ್ರಮದುವತಿ ವೋಗಿ, ನಾ ಬದಕಿರಾಕಿಂತ
ಒಂದ್ ನೂರು ವರಸ—
ಅರ್ದ ನನ ಆಯಸಾ ದಾರೆ ಯೆರಿತೀನಿ,
ಬ್ಯಾಗ್ ಔಳ ಕರಸ.
ಇಸ್ಟೇನು? ಅಸ್ಟೇನು? ಅರ್ದ ಇದೆ! ಇಕಾ!
ಪ್ರಮದುವತಿ ನನ ಪ್ರಾಣ! ಬೇಕು ನನಗನಕಾ!" ೧೬

ಅಟೆ ಯಿಂಗೆ ಅವ ಯಿಡದ;
ಅದಕ್ ಇಂದ್ರ ನುಡದ:
"ಭಪ್ಪರೇ ರುರು ರುಸಿ! ನಿನ ಮಾತು ಮಾತ್ರಲ್ಲ—
ಮನಸುನೂ ಬಲ್ಲೆ;
ಗಂಡು ಸಾವಿತ್ರಿ ನೀ, ಅವಳಂಗೆ ದಾಟಿದೇ
ಸಾವಿನಾ ಎಲ್ಲೆ;
ವ್ರುದಯ ನನಗೂ ಐತೆ—ಅದು ಏನು ಗೋಳಿಗೆ
ಕರಗದಾ ಕಲ್ಲೆ?
ಮತ್ತೆ ಬದುಕಿಸಿಕೊಂಡೆ ನಿನ ಪ್ರಮದುವತಿನ! ಅದೊ—
ನಿಂತು! ನೋಡ್ ಅಲ್ಲಿ!" ೧೭

ಎದ್ದು ಬಂದಳು ಒಳ್ಳೆ ನಿದ್ದೆ ತಿಳಿದಂತೆ—
ಪ್ರಮದುವತಿ ರುರುವಿನ್ ಅತ್ತ್ರ;
ನಂಬಲಾರದ ಪುನ್ಯ—ರುರು ಆಗ ಆಕ್ಸನ
ಗಾಳಿಯಲಿ ಬಾಳಿಪತ್ತ್ರ! ೧೮

ಇತ್ತ ಮದುವಣಿಗ ರುರು ನಿಂತ—ಎದುರ್ ಅತ್ತ
ಪ್ರಮದುವತಿ ಮದುವಣಿಗಿತಿ;
ಯಿರಿ ಪುರೋಯಿತ ಇಂದ್ರ; ಅವ ಯೇಳಿ ಮಂತ್ರ
ಆಯ್ತುವರ ಮದಿವೀ ಕತಿ. ೧೯

ಮುಂದೆ, ಮಕ್ಕಳ ಪಡದು ಪ್ರಮದುವತಿ ರುರು—
ಯಿಂಗೆನೇ ಅವರ ಸಂಸಾರ ನಡದು—
ಯಮದರ್ಮ ಕರದಾಗ ರುರು ಅಂದ: "ಸಿದ್ದ!
ಇದೊ ಬಂದೆ, ಪ್ರಮದುವತಿ ಕೈನ ಯಿಡದು!" ೨೦

ಯಿಂಗೆ, ನನ ಮಲ್ಲಿ, ಗಂಡಯೆಂಡರು ಯಿಂದೆ
ಬದುಕಿದರು, ಸತ್ತರು, ಒಟ್ಟಿಗ್ ಒಟ್ಟೊಟ್ಗೆ;
'ಮುತ್ತೈದಿ ಸಾವ್' ಅಂತೆ! ಮಂಕು ಮೂದೇವಿ!
ಅಮ್ಮನನ ಈಗಾರೆ ಕೇಳಿಕೋ ನೆಟ್‌ಗೆ! ೨೧

೩

ಯಿನ್ನೊಂದು ಕತೆ ಕೇಳೆ, ಪುಚ್ಚಿ,
ಕಿವಿ ನಿನ್ನ ಮುಕದಗಲ ಬಿಚ್ಚಿ.
ಕತೆನಿದನ ಯೇಳಿದವ ಜಯಿನ;
ಗಂಡ ಯೆಡ್ತೀರ್ಗೆ ಬಲು ವಯಿನ—
ಯಿದರಾಗ ಮಡಗಿರೋ ತತ್ವ!
ಅದೆ, ಮಲ್ಲಿ, ಈ ಕತೆ ಮಅತ್ವ! ೨೨

ಯಿಂದೆ, ಕ್ರುತಯುಗದಾಗ ನಡಧೋಯಿತಂತೆ!
ಯಾವುದೋ ಊರಂತೆ! ಅಲ್ ಅವರ್ ಇದ್ರಂತೆ!

ಊರು ದೇಸದ ಯೆಸರು ನೆಪ್‌ಆಗ್ದು ನಂಗೆ—
ಯೆಣ್ಣು—ಸ್ರೀಮತಿ; ಗಂಡು—ಅ್ಣ!—ವಜ್ರಜಂಗ! ೨೩

ಭೋ ಮುದ್ದು, ವೊಂದಿಕೊಂಡ್ ಅವರ ಸಂಸಾರ!
ನಾರೆ ಯಿಲ್ಲದ ಅರಳುಮಲ್ಲಿವೂ ಆರ!
ಎಳ್‌ಡು ಮೈನಾಗ್ ಒಂದೆ ಉಸಿರು ಸಂಚಾರ!
ಯಿಂತೋರಿಗ್ ಒಂದು ದಿನ ಬತ್ತು ಗಾಸಾರ! ೨೪

ತಾನ ಮಾಡಿದರಂತೆ ಒಂದು ದಿನ ರಾತ್ರಿ—
ಅದೆ, ಮಲ್ಲಿ, ಅವರ ರೂಡಿ;
ಒದ್ದೆ ತಲೆ ಕಾಯಿಸುವ ಅಗ್ಗಿಸ್ಟಿ ಅತ್ರಿ—
ಅಂತ ಅವರ್ ಇಬ್ಬರುವೆ ಕೂಡಿ—
ಕೆಂಡದಾ ತಲೆಮ್ಯಾಗೆ ಕೈತುಂಬ ತಗದು
ಕೆದರಿದರೆ ಅಗರಿನ ಪುಡಿ —
ಕಾಳಿಂಗ ನಾಗನಂಗ್ ವೊಗೆ ಮೇಗೆ ನೆಗದು
ಯಿಡಿಯಿತ್ ಅವರ್ ಕೆದರಿದ ಮುಡಿ! ೨೫

ಯಿಂಗೆ ಅಕಪಕದಾಗ ಗಂಡಯೆಡ್ತೀರು—
ನಡುವಿಲ್ಲ ಏನೆ ತಟಕಿ;
ನಿದಿರಾಯ ಒದಿವಾಗ ಏನು ಮಾಡ್ತೀರು?
ತೆಗಿಲ್ಲಿಲ್ಲ ಮರತು ಕಿಟಕಿ;
ನೀರೆರೆದು ಸೋತ ಮೈ; ಸೊಗಸಾದ ಗಂದ;
ಬತ್ತು ಬಲೆ ಯಮನಿದ್ದೆ ಬೇಗ!
ವೊಗೆ ಸುತ್ತಿ ಇಬರೂವೆ ಸತ್ತದ್ದೆ ಚಂದ—
ಒಬರೊಬ್ಬರದು ತೋಳಿನಾಗ! ೨೬

ಯಿಂಗೆ, ನನ ಮಲ್ಲಿ, ಗಂಡಯೆಂಡರು ಯಿಂದೆ
ಬದುಕಿದರು, ಸತ್ತರು, ಒಟ್ಟಿಗ್ ಒಟ್ಟೊಟ್ಟಿಗೆ;
"ಮುತ್ತೈದಿ ಸಾವ್" ಅಂತೆ! ಮಂಕು ಮೂದೇವಿ!
ಅಮ್ಮನನ ಈಗಾರೆ ಕೇಳಿಕೋ ನೆಟ್‌ಗೆ! ೨೭

೪

ಕತೆ ಕೇಳಿದಳು, ಮಲ್ಲಿ; ಮಾತಾಡದೀರ—
ಪಳಪಳಾ ಕಣುತುಂಬ ತಂದುಕೋತ ನೀರ—
ನನ ಕಾಲ ಮುಟಕೊಂಡು ಕಣ್ಣಿಗೊತ್ಕೊಂಡು—
"ಬನ್ನಿ"ಅಂತ್‌ಅಂದ್ಲು "ನಂ ಮಕ್ಕಳ್ ಎತ್ಕೊಂಡು!" ೨೮

ಯೇಳಿದರೆ ಕೇಳ್ಯಾಳ, ನನ ಮಲ್ಲಿ? ಮೊಂಡು!
ಅದಕೆ, ನಾನೇ ಸೋತು, ಕೇಳಿದೆ—ಗಂಡು:
"ಮಾತಾಯಿ! ಮಲ್ಲಿನೇ ತಾಯ್‌ಬೇರು ನನ ಜೀವಮರಕ!
ಕೇಳುದಿಸ್ಟೇ ನಿನ್ನ: ಒಟ್ಟಿಗೇ ಯಿಬ್ಬರನು ಕರಕ!" ೨೯

೧೭. ಮರ—ಬಳ್ಳಿ

ಮಲ್ಲೀಮರನ ಗಾಡ
ಕಚ್ಚೈತೆ ನೋಡ
ಗಂಡಾದ ನನ ಜೀವಬಳ್ಳಿ!
ಮಲ್ಲಿಯಿಲ್ಲದೆ—ಬ್ಯಾಡ
ಯೋಳೋದು ಪಾಡ!
ಅದ—ಬುಟ್‌ಕೊಡಾಕಿಲ್ಲ ಕಳ್ಳಿ! ೧

ಪೊರಗೆಲ್ಲ ನನ ದುಡತ!
ಒಳಗ್ ಅವಳ ಯಿಡತ!
ಯಿದೆ ನಮ್ಮ ಮನೆ ಪೈಲು—ಕಡತ!
ಸಿವ ಕೊಟ್ಟ—ಸುಕಪಡತ!
ಇಲ್ಲವೇ—ಬಿಡತ!
ಮಾತಾಯಿ ನಡಸಿದಂಗ್ ನಡಿತ! ೨

ಅಣ್ಣು ನಂ ಸಂಸಾರ!
ಯಿರಲಿ ಯೆಂಗಾರ!
ತಿರಳು ರಸ ಮಲ್ಲಿ; ನಾ ಸಿಪ್ಪೆ!
ಯಿಡಿದ್ ಅಂಗೆ ನೋಡೀರ?
ಅಂಗೈಯ ಬಾರ!
ರಸ ಯೆಲ್ಲ! ನಾ ಯಿಂಡಿ ಯಿಪ್ಪೆ! ೩

ಮಲ್ಲಿ, ನಿನ ನನಗಾಗಿ
ಯೆತ್ತು, ಮುದ್ದಾಗಿ
ಬೆಳಸಿದರೆ, ನಿನ ತಾಯಿತಂದೆ?

ಬಡವ ನಾ ; ನನ ಗುಡಲು
ನಿನಗೀಗ ಮಡಲು !
ಯಿದಕೇನ ನಡಸಿದ್ದೆ ಯಿಂದೆ ! ೪

ಗೊತ್ತು, ಜನ ಯೋಳ್ತಾರೆ ;
ಯೋಳ್ಕೊಳ್ಳಿ, ಬಾರೆ :
"ಗಂಡಿವಳು ; ಇವ ಯೆಣ್ಣುಗೊಂಬೆ !"
ನೆಗನೆಗದು ನರಿ ಬಿದ್ದು
ಯೋಳಿತಂತ್ ಎದ್ದು :
"ದ್ರಾಕ್ಸಿಯಿದು ಸೀಯಲ್ಲ ! ಯಿಂಬೆ !" ೫

ಮುಟ್ಟಿದರೆ ಬಲು ಗೋಳು
ವೊಟ್ಟೆಯುರಿ ಚೋಳು ;
ಯಿಂಗೆನೇ ಬೋ ಜನರ ಬದುಕು !
ಜನರ ನಾಲಗೆಕೊಡಲಿ
ಯೇನನಲಿ ಬಿಡಲಿ !
ಚಿಂತ್ಯಾಕೆ ಅದಕಿದಕು ಎದಕು ! ೬

ಎಳ್ಡು ಕೈ ಚಪ್ಪಾಳೆ !
ಇಲದೀರ ಬಾಳೆ ?
ಯೆಣ್ಣೇನು ? ಗಂಡೇನು ? ಯೋಳೆ !
ನೀನ್ ಇಲ್ಲಿ ಇಂಗ್ ಯಿಡಿಸಿ
ನಾನ್ ಅಂಗೆ ಮಡಿಸಿ
ತಿರುವೋಣ ಬದುಕುಬುಕ್ ಆಳೆ ! ೭

ಅರ್ದ ನಾರೀಸ್ವರನ
ನೆನೆ, ಮಲ್ಲಿ, ಅರನ;
ಮಗ ನಾನು—ನನ್ ಅಪ್ಪನ್ ಯತ್ರ!
ಒಸಿ—ಗಂಡು ಯೆಣ್ಣಂಗೆ
ಯೆಣ್ಣು ಗಣ್ಣಂಗೆ
ನಡಕಂಡ್ರೆ—ಅದೆ ಅವಗೆ ಪತ್ರ! ೮

ಅನ್ಯೋನ್ಯ ಅನೊ ಮಾತು
ಯಾತಕ್ ಆದಾತು—
ಗಂಡು ಯೆಣ್ ಒಂದಾಗದ್ ಒರತು?
ಮರಬಳ್ಳಿಗಳ ನೋಡಿ
ಕಲಿಬಾರ್ದ ಜೋಡಿ—
ಜನ ಬೇದಬಾವಾನ ಮರತು? ೯

ನಾ ಅಡಗು, ನೀ ಆಯಿ!
ನನ್ನ ಮನೆತಾಯಿ!
ನೀ ನೀರು, ನೀ ಗಾಳಿ, ಬ್ಯೆಳಕು!
ನಿನಗೆ ನಾ ಶಿಪ್ಪಾಯಿ!
ನೀನೆ ದಳವಾಯಿ!
ನಿನ್ನಿಂದ ನಾ ಮೇಕು ಕೆಳಕು! ೧೦

೧೮. ಗದ್ದೆ—ಪದ್ದೆ

ಗದ್ದೆ—ಗಡಆರೆ!
ಪದ್ದೆ—ಪೆಟ್ರೋಲು!
ಯಾತ್ರಾಗುನೂ ವಾತು
ಆಗ್‍ಬಾರ್ದು ಪೋಲು! ೧

ಒಂದು ಕೆತ್ತ್ತೈತೆ;
ಒಂದು ಸುಡತ್ತೈತ್;
ಎಳ್ಡುನೂ ಮನಸನ್ನ
ನ್ಯಾಕ್ ಎತ್ತತ್ತೈತೆ!

೧೯. ಗಳ್ಡವಾಹನ

ಗೋಯಿಂದೋ ಗೋಯಿಂದಾ
ಗಳ್ಡವಾಹನಾ ಗೋಯಿಂದಾ ೧

ಬಸ್ಸು ವುಳ್ಳಿತೊ ಜನ ತುಮಿಕೊಂಡು
ಮೇಲೆ ವಂದು ವಂದೂ—ಗೋಯಿಂದೋ.... ೨

ನಿನ್ನ ಕಾಲನ್ ಇಲ್ಲೆಲ್ಲಿ ಮಡಗತಿ
ತಲೆಯ ಮ್ಯಾಗೆ ತಂದೂ—ಗೋಯಿಂದೋ.... ೩

ಯಾವೊನ್ ಅವನದೀ ಬಾಯಿವಾಷಣೆ
ಕೊಳತ ಯೆಣವ ತಿಂದು—ಗೋಯಿಂದೋ.... ೪

ಬೀಡಿ ಅಚ್ಚಿದ—ಅಡಕು ಅಸಜ್ಞ
ಗೊಬ್ಬರ ಸುಟ್ಟ ಗಂದ—ಗೋಯಿಂದೋ.... ೫

ಬಾಯ ತಂಬುಲ ಚಿರಕ್ಕ್ ಪೀಚಿದ
ಓಕಳಿ ಬಿತ್ತು ಚಂದ—ಗೋಯಿಂದೋ.... ೬

ಒಳಗೆ ಸಿಕ್ಕಿ ಮೈ ಮೂಳೆ ಮಾಮಸ
ಬಜ್ಜಿಯಾಯ್ತು ಬೆಂದೂ—ಗೋಯಿಂದೋ.... ೭

ಎಷ್ಟೆ ಮುಕ್ಕಲಿ ಆಳ್ ಈ ಬಸಿಗೆ
ಆಗಾಕಿಲ್ಲ ಮಂದ—ಗೋಯಿಂದೋ.... ೮

ಆಗ ಸಾವ್‌ಕಾರ, ಬಾಕಿ ಮುಪ್ಪಾಗ
ಅವನು ಇವನು ತಿಂದ—ಗೋಯಿಂದೋ.... ೯

೨೦. ವೋಯ್ತೂ ನಿಯತ್ತು

ವೋಯ್ತು ವೋಯ್ತೂ ನಿಯತ್ತೂ ॥ ಪ ॥

ಆಡಿದಂಗ್ ಆಡಿದ್ದ ನಡಸೋದು ಸತ್ತು—ವೋಯ್ತು.... ೧
ತಿರುಗದಂಗ್ ಆಗೀವಿ ಎತ್ತಿ ತಲೆ ಕತ್ತು—ವೋಯ್ತು ೨
ಮಳೆನಿಲ್ಲ ಬೆಳೆನಿಲ್ಲ ಶಿಗದೊಂದು ತುತ್ತು—ವೋಯ್ತು.... ೩
ಎಲ್ಲೆಲ್ಲು ಬೀ. ಯಂ. ಒಂದಕ್ ಇಪ್ಪತ್ತು—ವೋಯ್ತು.... ೪
ದರ್‍ಮ್ರಕರ್‍ಮ್ರದ ಬದಲು ಲಂಚ ರುಸುವತ್ತು—ವೋಯ್ತು.... ೫
ಅನ್ನಿಲ್ಲ; ವೋಟಲೂ ಶಿನಿಮ ಸುತುಮುತ್ತೂ—ವೋಯ್ತು.... ೬
ಎಣುಗಂಡು ನೆಡ್ತಿ ಎಲಿನೆಲ್ಲೀಗೆ ಬತ್ತು—ವೋಯ್ತು.... ೭
ಯಿರೆರೇನೆ ಆವಾಗಿ ದೇಸಾನೆ ವುತ್ತು—ವೋಯ್ತು ೮
ಅಲ್‌ಒಬ್ರು ಇಲ್ಲೊಬ್ರು ನೆಟ್‌ಗೌರೆ ಗೊತ್ತು—ಆದ್ರೂ.... ೯
ಯೇನೆ ಆದ್ರೂ ನಮಗೆ ನಮ್ಮ್ರ ಗೈರತ್ತು—ಇದ್ರೂ.... ೧೦
ಅಣ್ಣಮ್ಮ್ರ ತಾಯಿನೇ ನಮ ಮೇಲೆ ಕುತ್ತು—ಕಾದ್ರೂ.... ೧೧
ಜೀವಿಲ್ಲದಾ ದೇಅ ಯಿದ್ದೇನು ಬತ್ತು—ವೋಯ್ತು.... ೧೨

೨೧. ಕಂಡಕ್ಟರ್ ಕಂದಾರಿ

"ಕಂದಾರೀ! ಕಂದಾರೀ!
ಕಂಡಕ್ಟರ್, ಏ ಕಂದಾರೀ!"
ಕೂಗ್ ಕೇಳಿಸ್ತು ಬಸ್ಸಿನ್ ತಾವ
ಒಂದ್‌ಎಳ್ಡ್‌ಮೂರ್‌ನಾಕ್ ಸಾರಿ. ೧

ಇವನ್ ಯಾವೋನೀ ಕಂದಾರೀ
ಬಸ್ ಕೆಲ್ಸಕ್ಕೂ ಬಂದಾರೀ?
ಆರಡಿಯಾಳು! ದೊಗಳೆ ಪಜಮಾ!
ಬಸ್ ಯಿಡಿಸುತ್ಯೆ? ರಾಂರಾಮಾ! ೨

ಸುತ್ತಿನ್ ಬೀದಿ ಸಮುದ್ರದಾಗೇ
ಕಣ್ಣೀನ್ ಅಡಗನ್ ಓಡಿಸ್ದೆ;
ಎಲ್ ಕಂದಾರೀಂತ್ ಎಲ್ ಕಂದಾರೀಂತ್
ಕಾಕಿ ಕುಡ್ತ್ಯಾನ್ ನೋಡಿಸ್ದೆ. ೩

ಓಡೋಡಿ ಬಂದಾ ಕಂದಾರಿ
ತರಗೆಲೆ ಬಂದಂಗ್ ತೂರಿ!
ನಾಕೂ ಚಿಲ್ಲರೆ ಅಡಿಯಿರಬ್ಯೆದು—
ಕಂದಾರಿ ಯೆಂಗಾದಾನೀ ಐದ? ೪

ತಲೆ ಮ್ಯಾಗ್ ಇಲ್ಲ ಕಂದಾರಿ ಪಗಡಿ!
ಅಃಕ್ಕ! ಅಃಕ್ಕ! ಸೀತ! ನೆಗಡಿ!
ಸಿಂಬಳಸುರಕ ಕಂದಾರಿಯಿವನಾ!
ಕಿವಿ ತುದಿ ಯಾವ್ದೋ ದೇವರ್ ದವನ! ೫

ಯೆಂಗ್ ಆದಾನ್ ಇವ ಕಂದಾರೀ?
ಕನ್ನಡ್ ಸೀಮೇದ್ರೀ ಈ ಮಾರಿ!
ಅಕ್ಕಿತಿಮ್ಮನಳ್ಳಿ ಮುಕ್ಕನ ಅಂಗೇ
ಅವ ಮಾತಾಡೊದು ಕೇಳಿಸ್ತು ನಂಗೆ! ೬

ಅವನ್ನೆ ಕೇಳಿದೆ ನನ್ ಸಂದೇಅ;
ನೊಕ್ಕವ ಬಳಕೊಂಡ್ ನಾಚ್ಕೇ ಲೇಅ—
"ಸುಮ್ಮಕ್ ಎಲ್ರು ನನ್ನ ಅಂಗಂತಾರೆ.
ಇದೆ ಕಾಣ್ರೀ ಇವರ್ ಇಕ್ಕೋ ಆರೆ." ೭

ಯಾಕೊ ಇವನ ಮಾತು ನಂಬಕ್ ಆಗೊಲ್ಲ.
ನಂಗೊ ಕಿವಿಯ ಬಾಯ್ ಬಿಡ್ತದೆ ಜೊಲ್ಲ.
ಇನ್ನ ನ್ಯಾಸ್ತ್ರದೊರ್ಗ್ ಒಂದಿಸ್ಟು ನಾಸ್ಟಾ
ಕೊಡಸು; ಬತ್ತದೆ—ಕತೆ ಅದು ಸ್ಪಸ್ಟ. ೮

"ಪುಟ್ರಂಗಪ್ಪ ನಿಂಗೆ ಕಂದಾರಿ ಗೊತ್ತು?"
"ನಾನೆ ಅಲ್ವ ಅನ್ನ ಕರೆದುದ್ ಈಟೊತ್ತು!"
"ಅಂಗಾರ್ ಔನಿಗೀ ವಿಚಿತ್ರಸರ್ ಯಾಕೆ?"
"ಓವೊ! ಅವನ ಕತೆ ಕೇಳಿಸ್ಕೊಬೇಕೇ?" ೯

ಕೇಳಿಯಪ್ಪ: ಇವ ನಮ್ ಅಳ್ಳಿ ಮುಕ್ಕ;
ಯೆಂಗಸಂದ್ರೆ ಇವಗಂಜಿಕೆ, ಪುಕ್ಕ!
ಅಪ್ಪ ಆಮ್ಮಗ್ ಇವ ಬೈರೂ ವುಡಗ;
ಇವಗೊ ಯೆಂಗಸಂದ್ರೆ ನಡಕಾ ನಡಕ! ೧೦

ಮೂರು ವರ್ಸ ಯಿಂದ್ ಇವ ಇಲ್ಲಿ ಬಂದ;
ಸತ್ತ್ರೆವಂತ, ಕೆಲ್ಸ ಮಾಡ್ತಿದ್ದ ಚೆಂದ;
ತಿಕೆಟುಬುಕ್ಕು ಟ್ರಿಪ್‌ಸೀಟು ಇವೆಲ್ಲಾ
ಟಾಕುಟೀಕು—ಒಂದೀಟು ತಪ್ಪಿಲ್ಲಾ! ೧೧

ನಾಕು ತಿಂಗಳ್ ಇಂದೆ ಬಂದಿತ್ ಒಂದ್ ಅಮ್ಮ;
ಅವಳದು ತಿಕೆಟು ವಸೂಲಿಗೆ ನಮ್ಮ
ಬೈರು ಬಂದವನೆ—'ಅಮ್ಮ, ತಿಕೀಟು?'
ಅಂದ್ರ ಅವಮ್ಮ ಅಂತು: 'ಕೈಸೆ ತಿಕೀಟು?' ೧೨

ಇವನ ಕನಡ ಅದಕ್ ಆರ್ತನೆ ಆಗ್ದು,
ದುಡ್ಡು ಕೊಡೊಕೆ ಕೈ ಮುಂದೆನೆ ಸಾಗ್ದು;
ಲಂಗಲಂಗದೊಳಗಿತ್ತು ಕಂದಾರಿ—
ರಂಗುವಸ್ತ್ರ ತಲೆ ವ್ಯಾಗಡೆ ಆರಿ. ೧೩

"ಇಲ್ಲಿ ವಸೂಲಿಗೆ ಏನಪ್ಪ ದಾರಿ?
ದೇವ್ರೇ ಬಚಾವ್‌ಮಾಡು ಈವೊಂದು ಬಾರಿ!
ವೊಳ್ಳೆ ಬುದ್ಧಿಕೊಡು ಈ ಯೆಂಗಸಿಗೆ!
ತಿಕೆಟು ಕೊಂಡುಕೊಳಲಿವಳೀ ಬಸಿಗೆ!" ೧೪

ವುಡುಗ ಪೆಚ್ಚಾದ್ದ ಕಂಡು ಕಂದಾರಿ,
ಕುರಿಯ ಕಂಡರೆಂಗೊ ಊರಿನ ಮಾರಿ
ಅಂಗೆನೇವ—ಊಂಪ್ಪ ಯಿರಿಯಿರಿ ಯಿಗ್ಗಿ,
ದುಡ್ಡ ಚೀಲದಿಂದೆತ್ತ್ರೊವಂಗೆ ಬೊಗ್ಗಿ - ೧೫

ಕಂಡಿವ್ರಲ್ಲ ನೀವ್ ಆವರ ಬಟ್ಟೀಯ?
ಸರಟು ಮುಚ್ಚತ್ತೈತ್ ಎಂಗ್ ಅವರ್ ಒಟ್ಟೀಯ
ಯಾವ್ದೊ ಮಾಯ್ದಾಗದನಂಗಿಡಿದೆತ್ತಿ
ಗುರಿಯ ಮಾಡಿಕೊಂಡು ಬೈರೂನೆತ್ತಿ— ೧೬

ಚಿಕ್ಕ ಮಕ್ಕಳ್ ಇಡ್ಡಿ ಚೀಪ್ತಾವಲ್ಲಪ್ಪ—
ಚಿರಕ್ ಚಿರಕ್—ಅದ ಕೈ ತುಂಬ ದಪ್ಪ . . .
ಬೈರೂ, ಪಾಪ, ಮೂತಿ ಮೇ ಕೆಳಗೆಲ್ಲಾ
ಆಲಿನ್ ಅಬಿಸೆಕ! ಕ್ಯೋಳ್ತಿಯ ಗುಲ್ಲ? ೧೭

"ಸೋತೆ" ಎಂದ ಬೈರು: "ಸಣ್ಣು ನಮ್ಮವ್ವ!
"ಎಗ್ಗು ಸಿಗ್ಗಿಲ್ಲದ ಕಂದಾರಿ ದೆವ್ವ!"
ಬಸ್ಸು ಬಸ್ಸೇ ವೋ ಎಂದಿತು ಸಾಕ್ಸಿ:
"ಪುಟ್ಟ ಬೈರೂ, ನೀ ಕಂದಾರಿ ಪಕ್ಸಿ!" ೧೮

ಇದೆ ಕನಪ್ಪ, ಕತೆ: ಕಂದಾರಿ ಆಲ
ಕುಡದು, ಆವೊತ್ತಿಂದ ಬೈರೂ ಕಂದಾರಿ.
ಇದನ ನೆನಸಿಕೊಂಡು ಪಕಪಕ ನಗತಿವಿ
ನಾವು ಬಸ್ಸಿನೋರು ಅತ್ತು ನೂರು ಬಾರಿ. ೧೯

ಪೊಗದಸ್ತಾಗದೆ ಪುಟ್ರಂಗಪ್ಪ
ಕಂದಾರಿ ಆಲಿನ ಚಿಲುಮೆ ಕತೆ!
ನೀವ್ ಅಲ್ ಇದ್ದೋರು ಪುನ್ಯ ಮಾಡಿದ್ರಿ!
ನಾನ್ ಇರನಿಲ್ವೇ—ಅದೆನೆ ವೆತೆ! ೨೦

೨೨. ಅಳ್ಳೀಮರ

ವೋಯ್ತಲ್ಲೋ ವೋಯ್ತಲ್ಲೋ ನಂ ಅಳ್ಳೀಮರ
ಪ್ಯಾಟೆಪಟ್ಣಕೆ ಬಂದು ಈ ಸುಡುಗಾಡಿನ ಸೌದೇಬರ ೧

ಕೆಂಪು ಚಿಗರಿನ ಕುಂಕ್ಮದಂಗಿತ್ ಅಳ್ಳಿ ಮಕದಾಗೇ
ಬಲ್ತ ಕರಿಯೆಲೆ ಚತ್ರಿಯಂಗಿತ್ ಚಾವ್ಡಿ ಪಕದಾಗೇ
ನೂರು ಸಾವಿರ ಅಕ್ಕಿ ಪಕ್ಸಿ ಎಸ್ಟು ಸುಕದಾಗೇ
ಇಂತದೂ ಅನ್ಯಾಯ ವುಂಟಾ ದೇವ್ರೆ ಜಗದಾಗೇ ೨

ಮಕ್ಕಳಿಲ್ಲದ ಮುತ್ತೈದೀರ್ ಇಲ್ ಬರೊರು ಸುತಿಸುತ್ತಿ
ದೂರದ್ ಅಳ್ಳ್ಯೋರ್ ಇಲ್ಲೆ ಕುಂತ್ ಬಿಚ್‌ತಿದ್ರು ತಂದ್ ಬುತ್ತಿ
ತಂಪು ಪಾನಕ ಕೋಸುಮರಿ ಇಲ್ಲಿ ತಪ್ಪದೊಪ್ಪತ್ತೂ
ಇದ್ದಕಿದ್ದಂಗ್ ಮರಕೆ ಬಂತ್ ಬರಬಾರದಾಪತ್ತೂ ೩

ವೋಯ್ತು ಮರ—ವೋ—ಮುಂಡವಿಲ್ಲದ ರುಂಡವೇ ತೇಟು
ಸಾಲು ನಾಗರಕಲ್ಲ ತಲೆಮೇಲ್ ಜೋರು ಬಿಸಿಲೇಟು
ಕ್ವಾಪಮಾಡ್ಕಂಡ್ ಕೆಂಡವಾದಂಗ್ ಕುದದು ಕಲ್ ಜಗತಿ
ಮುಟ್ಟದರೆ ಮುನಿತೈತೆ—ಆದ್ರೂ ಆಗ್‌ಬಾರ್ದು ಯಿಂಗೆ ಅತಿ ೪

೨೩. ಛೀ!

ಪುಂಡಮಾತು! ಛೀ! ಸುಡು!
ಕಿವಿಗೆ ಕಾದ ಗುಳ!
ಯೋಳಿದೋರ ಬಾಯಾಗೇ
ಬೀಳತೈತೆ ವುಳ! ೧

ಬಂಡಮಾತು ಬರದು—ಸೇದೇ
ವೋಗತೈತೆ ಕೈ!
ತಾಯಿ ಆಲು ಕುಡಿಲಿಲ್ಲಿದು—
ಏನೋ ತಿಂದ ಮೈ! ೨

ಸುಲಬದಾಗೆ ಸಿಕಾಕಿಲ್ಲ
ಮನಸು—ಕೋತಿಮರಿ!
ಮಾತಿಗೊಂದು, ಮೈಯಿಗೆರಡು,
ಅವಕೆ ಕಿತ್ತು ಗರಿ! ೩

ಮನಸಿಗೊಂದು ನೀನೆ ಸದಾ
ಕನಡಿ ಯೆತ್ತಿ ಯಿಡಿ!
ಯಿದನೆ ಬಾಪು ನಮಗ್ ಏಳಿದ್ದು:
"ಮಾಡು—ಇಲ್ಲ, ಮಡಿ." ೪

ನಾಗನ ಕನ್ನಡಕ್ಕೆ ಕನ್ನಡಿ

೧. ನಾನು ನಾಗಮುತ್ತು: ೧. ನಾನು ನಾಗಮುತ್ತು. ಶಾನೆ (ಬಹಳ) ದಿವಸವಾಗಿತ್ತು—ಹೀಗೆ ನಾನು ಹೆಡೆಯನ್ನು ಎತ್ತಿ ನಿಂತು. ೨. ಮೊನ್ನೆ ಏನಾಯಿತು: ನಾನು, ನನ್ನ ಪಾಡಿಗೆ, ನನ್ನ ಹುತ್ತ ಎಂದು ನನ್ನ ಮೈಯನ್ನು ತಲೆಯ ಸುತ್ತ ಸುತ್ತಿಕೊಂಡಿದ್ದರೆ—ನಿದ್ರೆಮಾಡುತ್ತ . . . ೩. ಬಂತಪ್ಪ, ಒಂದು—ಎಳೆಯ ನಾಗರ—ಅಲ್ಲ, ಒಳ್ಳೆ (ನೀರುಹಾವು); ಹಾವುಗಳ ಗುಂಪಿನಲ್ಲಿ ಅದೇ ನೀರುಗುಳ್ಳೆ; ವಾಸನೆ—ಹಸಿಹಸಿ ಕಡಲೆ ತಿಂದ ಹಾಗೆ; ಹಳೆ ವಾಸುಕಿಯಾದ ನನಗೆ ಹೇಳಿತು: 'ಏ ಜಳ್ಳೆ! ಮುಗಿದುಹೋಯಿತು ನಿಮ್ಮ ಕಾಲ. ಈಗೆಲ್ಲ ಪ್ರಗತಿ, ನಾವು ಅದರ ಬಾಲ. ಮುಂದೆ ಇದೆ ಮುದುಕಿ ಹಬ್ಬ—ಬಾಲದ ಆಚೆಯ ಹೆಡೆಯನ್ನು ಹೊತ್ತು ತರುವ ಗರ್ಭ. ೪. ಮಲಗಿ ಇದ್ದ ಹಾಗೆಯೇ ಎನ್ನಿಸಿತು ನನಗೆ: "ನಾನು ಕಾಣೆನೇ ನೀವು ಹೊತ್ತು ತರುವ ಗಬ್ಬ (ಹೊಲಸು ವಾಸನೆಯ)ನ್ನು? ಕತ್ತೆಯ ಬಾಲ(ಕ್ಕೆ ಕಟ್ಟಿ)ದ ಡಬ್ಬ(ದ ಹಾಗೆ) ಮೂರು ನಿಮಿಷದ ಸದ್ದು. ಮಂತ್ರಕ್ಕಿಂತ ಉಗುಳೆ ಹೆಚ್ಚು. ಸೋಪನ್ನು ಹಾಕಿ ತೊಳೆಯಿರಿ!" ಎನ್ನಿಸಿತು ನನಗೆ, ಮಲಗಿದ್ದ ಹಾಗೆಯೆ. ೫. (ಆದರೂ) ಆ ಒಳ್ಳೆ (ನೀರುಹಾವು), ಆ ಸೊಳ್ಳೆ (ಕ್ಷುದ್ರಜಂತು) ನನ್ನನ್ನು ಬಿಡಲಿಲ್ಲ. ಹುತ್ತದಲ್ಲಿ ಕೋಲುಹಾಕಿ ಚುಚ್ಚಿತು, ತಿವಿಯಿತು. ಹುತ್ತ ಮುರಿದುಕೊಂಡು ಅದರ ಮಣ್ಣು ಮೇಲೆ ಕವಿಯಿತು. ಉಸಿರು ಹಾಗೇ ಸಿಕ್ಕಿ, ನಾಲಗೆಯನ್ನು ನೆಕ್ಕಿ, ಹೆಡೆಯನ್ನು ಎತ್ತಿ, ಮೈಯನ್ನು ಬಿಚ್ಚಿ, ಘಟ(ಸರ್ಪ) ಹೊರಗೆ ಬಂತು. ಬಂತೊ ಇಲ್ಲವೊ—ಒಳ್ಳೆ ಓಟಕಿತ್ತು (ಓಡಿ) ಹೋಯಿತು. ೬. "ಏ ಒಳ್ಳೆ! ಗುಬ್ಬಿ (ಯಂಥ ಕ್ಷುದ್ರವೆ)! ಬಾ, ನಿನ್ನನ್ನು ರುಬ್ಬಿ (ಹಿಟ್ಟಿನಂತೆ ತಿರುವಿ) ಹುಯಿದು, ಕಾವಲಿಯ ದೋಸೆಯನ್ನಾಗಿ ಮಾಡಿ ತಿನ್ನುತ್ತೇನೆ. ಅಬ್ಬಾ, ನನ್ನ ಹಳೇ ಹುಲಿಯ ಮೀಸೆಯನ್ನು ಎಳೆದಾಡುತ್ತೀಯಾ!" ೭. ನನಗೋ ಬಹಳ ಕೋಪ! ಯಾರೊ ಎಂದರು: 'ಪಾಪ! ಬುದ್ಧಿ ಬಲಿಯದ ಹೀಚು (ಅಪಕ್ವ.) ಅದಕ್ಕಂತೂ ಹುಚ್ಚು. ನೀವು ಗೋಧಿ (ಕಾಳು, ಮತ್ತು ನಾಗರ.)—ಸುಲಭದಲ್ಲಿ ನುಚ್ಚು (ಪುಡಿ) ಆಗಬಾರದು. ಹೇಗಾದರೂ (ಹೊರಗೆ) ಬಂದಿದ್ದೀರಿ.

ಕುಚ್ಚು ಸಿಕ್ಕಿಸಿರಿ. ಮಾರ್ಕೆಟ್ಟಿಗೆ ಬಂದ ಮೇಲೆ ಮರೆ ಮುಚ್ಚು ಏಕೆ? ಗೆಜ್ಜೆ ಕಟ್ಟಿ! ಹೆಜ್ಜೆ ಹಾಕಿ! ಮತ್ತೊಮ್ಮೆ ನಿಮ್ಮ ನಾಗನೃತ್ಯವನ್ನು ನೋಡೋಣ! ನೀವು ಕೃತಕೃತ್ಯರಾದರೆ ಆಗಲಿ, (ಆಗದಿದ್ದರೆ) ಹೋಗಲಿ. ೮. ಮುಂದೆ ಇದೆ —ನನ್ನ ಹತ್ತಾರು ಹಜ್ಜೆ ಗುರುತು. (ಇದನ್ನು ನೋಡಿದ ಮೇಲೆ) ಎನ್ನಿಸುತ್ತದೆ: (ನೃತ್ಯಮಾಡುವುದು ನನಗೆ) ಇನ್ನೂ ತೀರ ಮರೆತುಹೋಗಿಲ್ಲ.

೨. ಬರುವೆಯಾ ಗೆಳೆಯ: ೧. ಅಜ್ಞಾತ ಹದಿನಾರು ವರ್ಷದ ಮೇಲಾಯಿತು; ಇನ್ನೂ ಒಸಿ(ಸ್ವಲ್ಪ) ಹಳೆಯ ನಾತ (ಕಂಪು) ಅಂಟಿಕೊಂಡಿದೆ; ನೀನು ನನ್ನ ಸಂಗಡ ಬರುವೆಯಾ ಗೆಳೆಯ? ಒಂದು ಈಟು (ಇಷ್ಟು) ಬಹು ಗುಟ್ಟು ಮಾತನ್ನು ಹೇಳುವುದಿದೆ. ೨. ಹಿಂದಿನ ಹಾಗೆ ಈಗ ನಾನು ಮಕ್ಕರಿ (ಗೂಡೆ) ಹೊರುವುದಿಲ್ಲ; ದಿನ ಕೂಲಿಯ ಆ ಚಾಕರಿ (ಜೀತಮಾಡುವ) ಆ ಕಾಲ ವೆಲ್ಲ ಹೋಯಿತು; ಹೆಪ್ಪು ಮೊಸರು ಹಾಕಿದ ಧಾರವಾಡದ ಭಕ್ರಿ (ಜೋಳದ ರೊಟ್ಟಿ, ಅದರ ಹಾಗೆ ಇದೆ) ನನ್ನ ಕೈಯಲ್ಲಿರುವ ಸರಕಾರದ ನವುಕರಿ. ೩. ಈಗ ನಾನು ಹೆಬ್ಬೆಟ್ಟು ಒತ್ತುವುದಿಲ್ಲ—ಮಸ್ತಾಗಿ (ತುಂಬಾ) ಓದುಬರೆಹ ಕಲಿತಿದ್ದೇನೆ—ನಾನು ಅಕ್ಷರಸ್ಥ! ನನ್ನವಳು (ತಾನು) ಪೊಗದಸ್ತಾಗಿ (ಭರ್ಜರಿ ಯಾಗಿ) ಕೂಲಿಮಠ ಮಿಡ್ಲ್‌ಸ್ಕೂಲ್‌ಗಳನ್ನು ಮುಗಿಸಿ, ನನಗೂ ಪುಸ್ತಕ ಹಿಡಿಸಿದಳು. ೪. (ಅವಳೊಡನೆ) ಮದುವೆಯಾಯಿತು—(ಆಗಲೆ) ನನಗೆ ಮನೆಯೇ ಮಠ (ಶಾಲೆ) ಆಯಿತು. ಹೆಂಡತಿ ಕಲಿಸಿದ ಓದೇ ನನ್ನ ಮೆದುಳಿನ ತೆನೆಗೆ ರಸ ತುಂಬಿ, (ಅದರಿಂದ) ಹೊಡೆ (ತೆನೆ) ಬಲಿತರೆ, ನನಗೇನು ಗುನುಗೆ (ಕೊರತೆಯೆ)? ಹೀಗೆ ನನ್ನ ಹೆಂಡತಿಯ ಮನೆಗೆ ನಾನು ಯಜಮಾನ. ೫. ಹಳೆಯದು ಹೋಗಿಲ್ಲ, ಹೊಸದು ಹಿಡಿದಿಲ್ಲ; ನನ್ನ ಕನ್ನಡ, ಹೀಗಾಗಿ, ಎರಡು ಕಡೆ ಮಸೆದು, ಬಂದಹಾಗೆಹಾಡುತ್ತೇನೆ; ಅದನ್ನು ಹೇಗೆಹೇಗೋ ಬರೆಯುತ್ತೇನೆ. ನನಗೋ ಇದೆಲ್ಲ 'ಹೆತ್ತವರಿಗೆ ಹೆಗ್ಗಣ (ಮುದ್ದು)' ಎಂಬ ಕತೆಯೇ (ಆಗಿದೆ.)

೩. ನಲ್ಲಿಯ ತಾವು (ಹತ್ತಿರ) ನಮ್ಮ ಮಲ್ಲಿ: ೧. ಬೇಲೂರಿನ ಗುಡಿಯಲ್ಲಿ ಕನ್ನಡಿಯ ಕೈಯಿನ ವಿಗ್ರಹ ಇಲ್ಲವೇ ಅಲ್ಲಿ, ಹಾಗೆಯೇ ಕೈಯಲ್ಲಿ ಚೌರಿಗೆ (ಬಿಂದಿಗೆ) ಹಿಡಿದುಕೊಂಡು, ನಲ್ಲಿಯ ಹತ್ತಿರ ನಮ್ಮ ಮಲ್ಲಿ! ೨. ಬಣ್ಣವೂ ಒಸಿ (ಸ್ವಲ್ಪ) ಹಾಗೆಯೇ! ಎದೆಯ ಭಾವ(ಮಾಟ)ವೂ ಹಾಗೆಯೇ! ಮಲ್ಲಿ ಯಾರೆ? ಏಕೆ, ಅವರ ಅಪ್ಪ ನನಗೆ ಹೆಣ್ಣು ಕೊಟ್ಟು, ಮಾವ! ೩.

ಅವರ ಅಪ್ಪನಿಗೆ ಅವಳು ಜೀವದ ಜೀವ! ಅವರ ಅಮ್ಮನಿಗೆ ಅವಳು ಕಣ್ಣು! ನನಗಂತೂ—ಓ, ಏನು ಹೇಗೆ ಹೇಳಲಿ—ಬಾದಾಮಿ ಮಾವಿನಹಣ್ಣು! ೪. ಮಿಕ್ಕವರು ಯಾರಾದರೂ 'ಮಲ್ಲಿ' ಎಂದು ಅಂದರೆ, ಹಲ್ಲು ಉದುರಿಸಿಬಿಟ್ಟಾಳು! ನಾನು ಎನ್ನಬಹುದು; ನನಗೆ ಅವಳು ಹೆಂಡಿರು (ಹೆಂಡತಿ ಎಂಬುದರ ಗೌರವ ರೂಪ)! ಸಲಿಗೆ—ನನಗೇನು ಹೇಳು! ೫. ಮಲ್ಲವ್ವನನ್ನು ನಾನು ಮೊದಲು ನೋಡಿದ್ದು—ನಮ್ಮ ಪೇಟೆಯ ನಲ್ಲಿಯ ಹತ್ತಿರ; ಅವಳಿಗೂ ಹೀಗೆ ಎನ್ನಿಸಿತಂತೆ: 'ಇವನು ಯಾರು ಹೀಗೆ ನೋಡುವವನು?' ೬. ಮಲ್ಲಮ್ಮನಿಗೂ ನನ್ನ ತಂಗಿಗೂ ನಲ್ಲಿಯ ನ್ಯಾಸ್ತ (ಸ್ನೇಹ) ಬಹಳ. ಮಲ್ಲಿ ಎಸೆದಿದ್ದ ಗಾಳ (ಮೀನು ಹಿಡಿಯಲು ಎಸೆಯುವ ದಾರದ ಕೊನೆಯ ಕೊಕ್ಕೆ) ನನ್ನನ್ನು ಮೀನು ಹಿಡಿದ ಹಾಗೆ ಹಿಡಿದುಹಾಕಿಬಿಟ್ಟಿತು!. ೭. ನಮಗೆ ಮೂರು ಮಕ್ಕಳು ಹುಟ್ಟವೆ—ಎರಡು ಗಂಡು, ಒಂದೇ ಹೆಣ್ಣು; ಆದರೂ ಮಲ್ಲಿ ನೀರಿಗೆ ಹೊರಟಳು ಎಂದರೆ, ಅತ್ತಾಗೇ(ಅತ್ತಕಡೆಯೇ) ನನ್ನ ಕಣ್ಣು! ೮. ನಿಂತರೆ ಒಂದು ಚೆಂದ! ಕುಳಿತರೆ ಒಂದು ಚೆಂದ! ನಡೆಯುತ್ತಾ ಇದ್ದರೆ ಒಂದು ಚೆಂದ! ಮಲ್ಲಿ ಚೌರಿಗೆ (ಬಿಂದಿಗೆ) ಬೆಳಗುವುದೇ ಚೆಂದ! ನೀರು ತುಂಬುವುದೂ ಚೆಂದ! ೯. ತುಂಬಿದ ಚೌರಿಗೆಯನ್ನು ಹೂ ಎತ್ತಿದ ಹಾಗೆ ಸೊಂಟ(ಟೊಂಕ)ದಲ್ಲಿ ಸಿಕ್ಕಿಸುವುದೆ ಚೆಂದ! ನಿರಿಯನ್ನು ಇಂಕ್ರ (ಸ್ವಲ್ಪವೂ) ನೆನಸದೆ, ಹಾಗೆಯೇ ಚಿಮ್ಮುತ್ತಾ ಬರುವುದೆ ಚೆಂದ! ೧೦. ನೀರು ಎಷ್ಟು ಹೊತ್ತರೂ—ಬಾಬಯ್ಯನ ಆಣೆ—ತೋಳು ತೊಡೆ ನಡುಗುವುದಿಲ್ಲ. ಎರಡು ಹನಿ ಬೆವರು ಬಂದರೇನು ಈಗ—ಕುಂಕುಮ ಕದರು(ಕಲಸಿಕೊಳ್ಳು)ವುದಿಲ್ಲ. ೧೧. ನಲ್ಲಿಯ ಹತ್ತಿರ ಯಾರದೂ ರಾಂಗ್ (ತಂಟೆ, ತಕರಾರು) ಮಾತಿಲ್ಲ, ಮಲ್ಲಿ ಅಲ್ಲಿರುವ ವರೆಗೆ. ಮರ್ಯಾದೆಗೆ ಅವಳು (ತಾನು) ಮೇಲ್ಪಂಕ್ತಿಯೇ (ಎಂದ ಮೇಲೆ) ಮಿಕ್ಕವರು ತಪ್ಪುವುದಕ್ಕುಂಟೆ? ೧೨. ಮಕ್ಕಳು ಬಂದರೆ, ಹಸು ಕರು ಬಂದರೆ, ಅವುಗಳಿಗೇ ಮೊದಲಿನ ಪಂಕ್ತಿ; ಮತ್ತೆ ಬರಬೇಕು ಮುದುಕಿಯರ ಪಾಳಿ (ಸರದಿ)—ಇದು ನಮ್ಮ ಮಲ್ಲಿಯ ಸಂಗ್ತಿ (ಜೊತೆಯ ನಡೆವಳಿಕೆ). ೧೩. ನಲ್ಲಿಯ ನೀರಿಗೆ ನೂಕು ನುಗ್ಗಲು ಉಂಟೆ? ಬಾಯಿ ಜೋರು ಮಾಡುವುದಕ್ಕೆ ಉಂಟೆ? ಸಾಲಾಗಿ ನಿಲ್ಲಬೇಕು, ಸಿಪಾಯಿ ನಿಂತ ಹಾಗೆ—ಚೌರಿಗೆ ತುಂಬುವ ವರೆಗೆ. ೧೪. ನಲ್ಲಿಯ ನೀರಿಗೆ ಬಂದವರಲ್ಲ; ಇದು ಲಾಲ್‌ಬಾಗಿನ ಪರಿಷೆ! ಒಂದೇ ಮನೆಯವರು ಬಿಂದಿಗೆ ತಂದ

ಹಾಗೆ! ಅದು—ನಮ್ಮ ಮಲ್ಲಿಯ ವರಿಸೆ (ಕ್ರಮ.) ೧೫. ಒಂದೊಂದಲ್ಲ—ನಲ್ಲಿಯ ಹತ್ತಿರ ನಮ್ಮ ಮಲ್ಲಿ ಆಡುವ ಆಟ. ಮಲ್ಲಮ್ಮನ ಸಂಗಡ ಯಾರೂ ಬಾಲ ಬಿಚ್ಚುವ (ತಲೆಹರಟೆ ಮಾಡುವ) ಹಾಗಿಲ್ಲ. ೧೬. ಮಲ್ಲಮ್ಮ—ನನ್ನ ಮಕ್ಕಳ ತಾಯಿ; ಮಲ್ಲಿ—ನನಗೆ ಅವಳು ಹೆಂಡಿರು. ನಮ್ಮ ಪೇಟೆಗೆ ಅವಳೇ ಪಾಳೆಯಗಾರ್ತಿ. ಇಂಥವಳನ್ನು ಯಾರು ಕಂಡವರು! ೧೭. ಅಣ್ಣಮ್ಮ ತಾಯಿ! ನಿನಗೆ ಅಡ್ಡಬಿದ್ದೆ; ನನ್ನ ಹೆಂಡಿರು, ಮಕ್ಕಳು, ಪೇಟೆ ಚೆನ್ನಾಗಿರಲಿ. ನೋಡಿಕೊಳ್ಳವ್ವಾ. ನೀನೇ ನಮಗೆ ಕೋಟೆ (ರಕ್ಷೆ.)

೪. **ನನ್ನ ಹೆಂಡತಿ:** ೧. ಮೋಹಿನಿಯ ಅವತಾರವನ್ನೆತ್ತಿ, ಮಂಕು ರಾಕ್ಷಸರಿಗೆ ಸೊನ್ನೆಸುತ್ತಿ (ಏನೂ ಇಲ್ಲದ ಹಾಗೆ ಮಾಡಿ), ದೇವತೆಗಳಿಗೆ ಅಮೃತದ ಬುತ್ತಿಯನ್ನು ತಂದ ಮಾದರಿ, ಸೌಟು ಹಿಡಿದು ಎತ್ತಿ (ಬಂದವಳು) ಯಾರೇ? ನನ್ನ ಹೆಂಡತಿಯಾದ ನೀನಲ್ಲವೆ? ೨. ರೇಷನ್ ಅಕ್ಕಿಯಲ್ಲಿ ತುಂಬ ಕಲ್ಲು, ಹಸಿ ಸೌದೆಯ ಹೊಗೆ ಮೂಗನ್ನು ಮುತ್ತಿ, ಬಾವಿಯ ನೀರಲ್ಲಿ ಬೇಳೆ ಬೇಯದೆ, (ಹೀಗೆ) ಅಡುಗೆ ಮನೆಯಲ್ಲಿ ದಿನಕ್ಕೆ ಎರಡು ಸರದಿ (ಸಲ) ಯಾರೆ (ದುಡಿಯುವವರು ?) . . . ೩. ಮನೆಯನ್ನು ತುಂಬುವ ಮೂರು ಮಕ್ಕಳನ್ನು ಕೊಟ್ಟು, ಅವರ ಸೊಟ್ಟು(ವಕ್ರತೆ)ಗಳನ್ನು ತಿದ್ದಿ ನೇರಮಾಡುತ್ತ, ಆಗಾಗ ನನಗೂ ಒಂದು ಮೊಟ್ಟು (ತಲೆಯ ಮೇಲೆ ಪ್ರಹಾರ) ಬಿಡುತ್ತ, ನೋಡಿಕೊಂಡು ಮಾತಿನ ಕತ್ತಿಯನ್ನು ಬೀಸುವವರು ಯಾರೆ? . . . ೪. ನಗುತ್ತಾ ಇದ್ದರೆ, ನೀನು ರಾಮನ ಹೆಣ್ಣು (ಸಾಕ್ಷಾತ್ ಸೀತೆ), ಕೆರಳಿಬಿಟ್ಟೆ ಎಂದರೆ (ನಿನ್ನದು) ಬಲಭೀಮನ ಕಣ್ಣು, ಸಡ್ಡೆ (ಲಕ್ಷ್ಯ) ಮಾಡದಿದ್ದರೆ ನಿನಗೆ ನಾನು ಮಣ್ಣು(ನಿಕೃಷ್ಟವಸ್ತು); ಹೀಗೆ ನಮ್ಮ ಪ್ರೀತಿಯ ಬತ್ತಿಯನ್ನು ಮೀಟುವವರು ಯಾರೆ? . . . ೫. ಮಲ್ಲಿಗೆ ಹೂವಿನ ಹಾಗೆ ನಗುತ್ತಾ ಇರುತ್ತೀಯೆ, ಮಿಂಚು ಗುಡುಗಿನ ಹಾಗೆ ಗದರಿ ಸಿಡಿಗುಟ್ಟುತ್ತೀಯೆ, ಹಾಗೆಯೇ ಕಣ್ಣಲ್ಲಿ ಗಂಗೆಯನ್ನು ತರುತ್ತೀಯೆ; ಹೀಗೆ, ಇಲಿಯನ್ನು ಕೊತ್ತಿ (ಬೆಕ್ಕು) ಆಡಿಸುವ ಹಾಗೆ ನನ್ನನ್ನು ಆಡಿಸುವವರು ಯಾರೆ? . . . ೬. ಮಹಾತಾಯಿ! ಮನೆಯ ಲಕ್ಷ್ಮಿ ಮಲ್ಲಿ! ನೀನೆ ಕೆಂಪು, ವಜ್ರ! ನಿನ್ನ ಪಕ್ಕದಲ್ಲಿ ಬೇರೆಯ ಹೆಣ್ಣೆಲ್ಲ ನಡು ರಸ್ತೆಯ ಜಲ್ಲಿ (ಒಡೆದ ಕಲ್ಲಿನ ಚೂರು)—ಎನ್ನಿಸಿ, ಹೀಗೆ ನನ್ನನ್ನು ಮೇಲೆತ್ತಿ (ಬೀಳದ ಹಾಗೆ) ಹಿಡಿದವರು ಯಾರೆ? . . .

೫. ತಿರುಮಂತ್ರ: ೧. Handle ಹೀಗೆ ಹಿಡಿದುಕೊ. Seat ಮೇಲೆ ಮಡಗಿಕೊ (ಇರಿಸಿಕೊ.) ೨. ಐ! ನಾಚಿಕೆ ಏಕೆ ಮಲ್ಲಿ? ಇಲ್ಲಿ ಯಾರು ಔರೆ (ಇದ್ದಾರೆ?) ಬೆಳುದಿಂಗಳು ಇದ್ದರೆ ಏನೇ? ಸುತ್ತ ಎಲ್ಲ ಮಬ್ಬು (ಮಸಕು.) ಬೇಕಾದರೆ ನೀನು ನನ್ನನ್ನು ಹೀಗೇ ಇಲ್ಲೇ ತಬ್ಬು—ಪತ್ತೆಯೆ ಆಗುವುದಿಲ್ಲ! ನೋಡುವವರು ಯಾರೂ ಇಲ್ಲ. ೩. ಹೀಗೆ ಕುಳಿತರೆ ಹೇಗೆ—ನಾನು ಕಲಿಸಿಕೊಡುವುದಕ್ಕೆ ಉಂಟೆ? ಯಾಕೆ, ಪಿರಕಿ (ಭಯಗೊಂಡವಳೆ, ಭೀರು)? ನಿನಗೆ ಸೊಂಟ ಸಡಿಲವೇನು? ನಂಬು—ನಿನ್ನ ಪಕ್ಕದಲ್ಲಿ ನಾನು ಇರುವ ವರೆಗು—ಮೀಸೆಯ ಮೇಲೆ ಹೀಗೆ ಕೈ! (ನಾನು) ಬೈಸಿಕಲ್ ಬಂಟ (ವೀರ.) ೪. ಅಕ್ಕಳಿಸು— (ಎಂದರೆ) ಹೊಟ್ಟೆಯನ್ನು ಒಳಕ್ಕೆ ಎಳೆದು ಎಳೆದುಕೊ. ಮುಂಭಾರ(ವಾಯಿತು!) ಐ! ಕೆಳಕ್ಕೆ ಅಷ್ಟು ಬಗ್ಗಬೇಡ! ಙ್ಞ! ಹಾಗೆ! ಕುದುರೆಯ ಮೇಲೆ ಸಿಪಾಯಿ ಕುಳಿತ ಹಾಗೆ! ಮೈಯಿ ನಡುವಿಂದ ಮೇಲೆ ನಿಂತ ಹಾಗಿರಬೇಕು. ೫. ಇಲ್ಲಿ—ಈ ಕಾಲು ಈಕಡೆ—ಈ pedal ಇನ ಮೇಲೆ ಹಾಕು; ಅಲ್ಲಿ—ಆ ಕಾಲು ತಾ—ಆ Pedalಅನ್ನು ತುಳಿ, ನೂಕು; ಇದು brake, ಇದನ್ನು ಮುಟ್ಟಬೇಡ. ಮುಟ್ಟಿದರೆ, (ಇದು) ಮುಖಕ್ಕೆ ಮೂರು ಒದೆಯನ್ನು ಇಕ್ಕು (ಹೊಡೆಯು)ತ್ತದೆ. ೬. ಹಾಗೆ ನನ್ನ ಮೇಲೆ ಓಲಬೇಡ. ಅದಕ್ಕೆಲ್ಲ ಹೊತ್ತು—ಇಳಿದ ಆ ಮೇಲೆ. ೭. ಭದ್ರವಾಗಿ ಕುಳಿತಿರುವೆಯಾ? ಕೈ ಬಿಡಲೇನು? ಬೀಳುವ ಹಾಗಾದರೆ, ಸಹಾಯ ಇಲ್ಲಿ ಇದ್ದೇನೆ. ೮. ಬಿಡಲೇನು? ಬಿಡುತ್ತೇನೆ? ಙ್ಞ! ಇದೋ! ಬಿಟ್ಟೆ! ಬಿಟ್ಟೆ! ಎಲಾ ಮಲ್ಲಿ! ಏನೇ ನೀನು ಹೀಗೆ ಹೋಗುವೆ, ಚಿಟ್ಟೆ ಹೋಗುವಂತೆ! ದುಂಬಿ ಹೋದ ಹಾಗೆ ಹೋಗುವೆ, ಕಂಬ ಸುತ್ತಿದ ಹಾಗೆ ಸುತ್ತುವೆ, pedalಅನ್ನು ತುಳಿತುಳಿಯುವೆ, ಸರ್ಕಸ್ಸೇ ಮಾಡುವೆ; handleಅನ್ನು ಕೈ ಬಿಡುವೆ, ಆಚೆಗೆ ಈಚೆಗೆ ಹೀಗೆ ಆಡುವೆ; ನನಗೆ ನನ್ನ ಹೆಂಡತಿ ಕೈ ಕೊಟ್ಟ(ಮೋಸಮಾಡಿದ) ಳಲ್ಲಪ್ಪಾ! ೯. 'ಮಹಾರಾಯಿತಿ, ನಿನಗೆ cycleಅನ್ನು ಕಲಿಸಿದವರು ಯಾರೆ, ನನ್ನ ಗರತಿ?' 'ಪೇಟೆಯ ಅಣ್ಣಂದಿರೆಲ್ಲ ನನಗೆ ಇಲ್ಲಿ ನೂರಾರು ಸಲ ಪಾಠ ಹೇಳಿದ್ದಾರೆ.' ೧೦. 'ಮತ್ತೇನು ಭರತನಾಟ್ಯ ಮಡಗಿ(ಇರಿಸಿ)ದ್ದೀಯೆ? ಚಿಂತೆಯಿಲ್ಲ - ರಹಸ್ಯ ಹೇಳು.' 'ಹೇಳುವ, ಕೇಳುವ ಸಮಯ ಬರುತ್ತದೆ—ಈಗ ಹಾಸ್ಯ ಸಾಕು, ಏಳಿ.' ೧೧. 'ಬರುತ್ತೀರ, ಒಂದು ಕೈ (ನೋಡೋಣ,)

bar ಮೇಲೆ doubleಸವಾರಿ ? ಹೂಂ ರೀ! ನಿಜಾ ರೀ!' 'ಸದ್ಯ, ಕತ್ತಲಲ್ಲಿ ನನ್ನ ಮರ್ಯಾದೆ ಕಳೆದೆ! ಬರದೆ ಇದ್ದರೆ ಬಿಡುವೆಯಾ, ಬಜಾರಿ (ಗಂಡುಬೀರಿ!)

೬. ಮಕ್ಕಳು ಇವು ಮೂರು : ೧. ಒಂದು ಬಕಾಸುರ, ಒಂದು ಹಿಡಿಂಬ, ಒಂದಂತೂ ಥೇಟು ತಾಟಕಿ; ಗೋಳು ಹುಯಿದುಕೊಳ್ಳುತ್ತವೆ; ಗದರಿಸಿದರೆ, ಸುಮ್ಮನೆ ಮುಖಮುಖ ನೋಡುತ್ತವೆ. ೨. ಹಾದಿಯ ವ್ಯವಹಾರ ಹಚ್ಚಿ ಬರುತ್ತವೆ—(ಅದಕ್ಕಾಗಿ) ತೆರುವ ಋಣ ಸುಮಾರೆ (ತಕ್ಕಮಟ್ಟಿಗೆ) ಆಗುತ್ತದೆ; ತಪಸ್ಸು ಮಾಡಿ, ತದ್ವತ್ತು ತಾಯಿಯೇ (ಈ ಮಕ್ಕಳು;) ಮಲ್ಲಿಯ ಗುಣ ಎಲ್ಲಿ ಎಂದು (ಕೇಳುವುದು) ಬೇಡ! ೩. ಹಸಿಯೊ ಬಿಸಿಯೊ, ಯಾವುದು ಹೇಗೇ ಇರಲಿ—ಸರಿ! ಒಂದು ಬಿಟ್ಟು—ಅದು ಮಾಂಸ—ದೊಡ್ಡವನ (ಇವನೆ ಬಕಾಸುರ!) ಹೊಟ್ಟೆ (ಅದು) ಏನು ಅಗಸರ ಒಲೆಯೋ ಕಾಣೆ—ಕಂಡದ್ದೆಲ್ಲ ಛಟ್ಟು (ಸ್ವಾಹಾ!) ಧ್ವಂಸ! ೪. ಅವನ ತಮ್ಮ (ಇವನೆ ಹಿಡಿಂಬ!) ಬಹಳ ಕಳ್ಳಕೊರಮ! ತಾನು ಯಾವುದಕ್ಕೂ ಸಿಕ್ಕದೆಯೆ, (ತನ್ನ) ತಂಗಿಯನ್ನು ಕಳಿಸುತ್ತಾನೆ—ತಲಾಷ್ (ಅನ್ವೇಷಣೆ) ಮಾಡುವುದಕ್ಕೆ! ಭೂಪ ಎಂದರೆ ಇವನೆ! ಧೀರ! ೫. ಇವನ ಸೇರಿಗೆ ಅದು ಸೇರೂಕಾಲು! 'ನೂಲಿನಂತೆ ಶಾಲೆ (ಸೀರೆ)' ಎಂಬ ಗಾದೆ(ಯಂತೆ ಮಲ್ಲಿಗೆ ತಕ್ಕ ಮಗಳು ಈ ತಾಟಕಿ!) ತಮ್ಮಷ್ಟಕ್ಕೆ ತಾವು ಹುಡುಗರು ಹೋಗುತ್ತಿದ್ದರೆ, ಅವುಗಳಿಗೆ ಈ ಹೆಣ್ಣಿನಿಂದ ಬಹಳ ಬಾಧೆ! ೬. ಮತ್ತೆ, ಶಿವನೆ ಬಲ್ಲ, ಏನು ಹೇಗಿದೆಯೋ ಅದರ ಮನಸ್ಸಿನ ಇರಾದೆ (ಇಚ್ಛೆ?) ತಿಂಡಿ ಕೈಯಲ್ಲಿ ಉಳ್ಳವರನ್ನು ಕಂಡರೆ, ಅದು ಹೇಳುತ್ತದೆ: 'ನೀನೆ ಕೃಷ್ಣ! ನಾನೆ ರಾಧೆ!' ೭. ಒಳ್ಳೆಯ ಮಾತಿನಲ್ಲಿ ಅವುಗಳೇ ಕೊಟ್ಟರೆ ಸರಿಹೋಯಿತು; ಕೊಡದೆ ಇದ್ದರೆ, ಅವುಗಳಿಗೆ ಗತಿ—ಬೇಡ! ಎರಡು ಅಣ್ಣ, ಒಂದು ತಂಗಿ ಸೇರಿಕೊಂಡು, ಸೇಡು (ಪ್ರತೀಕಾರ) ತೀರಿಸಿಕೊಳ್ಳುತ್ತವೆ! ೮. ರೋಪು (bluff), ರಂಪಾಟ, ಜರುಬು, ದಬಾವಣೆ, ಕೇರಿಯನ್ನೆ ನಡುಗಿಸುವ ಗತ್ತು (ಠೀವಿ)—ಇವು ಮಲ್ಲಿಗೆ ಹೇಗೋ ಅವಳ ಮಕ್ಕಳಿಗೂ ಹಾಗೆಯೇ! ನನಗೆ ಅದೇ ತ್ರಾಣ, (ಅದೇ) ತಾಕತ್ತು (ಸತ್ವ.)

೭. ಪ್ರಶ್ನೆ—ಉತ್ತರ : ೧. (ಮೊದಲನೆಯ ಮಗ): 'ಅಪ್ಪಾ, ನಾಲ್ಕು ಆಣೆ ?' (ನಾಗ): 'ಏತಕ್ಕೋ ಪುಟಾಣಿ ?' (ಮೊದಲನೆಯ ಮಗ): 'Hair cutting Saloon.' (ಕೊನೇ ಮಗಳು): 'ನನಗೆ ಆರು ಕಾಸು ?'

(ನಾಗ): 'ಏತಕ್ಕೆ ಬಂಗಾರು?' (ಕೊನೆಯವಳು): 'Baloon ಕೊಂಡುಕೊಳ್ಳು ವುದಕ್ಕೆ!' ೨. (ನಾಗ): 'ನಿನಗೋ ಶುನಶ್ಶೇಫ?' (ಮಧ್ಯದ ಹುಡುಗ): 'ನನಗೆ ಒಂದು ಹೊಸ ಟೋಪಿ!' (ನಾಗ): 'ಯಾರಿಗೆ ಹಾಕುವುದಕ್ಕೆ?' (ನಾಗ): 'ನಿನಗೆ ಏನು ಬೇಕೆ ಹುಡುಗಿ?' (ಮಲ್ಲಿ): 'ಹದಿನೈದು ಹಾಗೆ ತೆಗೆದು ಮಡಗಿ!' (ನಾಗ): 'ಹಾಕಿದೆ ನನಗೆ ಕೊಕ್ಕೆ!'

೮. **ತುಳಸೀಪೂಜೆ**: ೧. ಮನೆಯ ಮುಂದೆ ತುಳಸಿಕಟ್ಟೆ. ಕೈಯಲ್ಲಿ ಹಿತ್ತಾಳೆ ತಟ್ಟೆ. ಪಂಚವಾಳ, ಹೂವು—ಹಣ್ಣು ಕರ್ಪೂರ. ಸ್ನಾನಮಾಡಿದ ತಲೆ ನೀರನ್ನು ತೊಟ್ಟಿಕ್ಕುತ್ತ, ಅರಿಸಿನದ ಕೆನ್ನೆ, ಹಣೆಯಲ್ಲಿ ಕುಂಕುಮ, ಗಾಜಿನ ಬಳೆ ಗಲಿಗಲಿ,—ಹೀಗೆ ಮಲ್ಲಿ ಬಂದಳು ಎಂದರೆ –ಕೊರಳಿನಲ್ಲಿ ಕರಿಮಣಿ, ಅದರ ನಡುವೆ ಚಿಕ್ಕ ಬೊಟ್ಟು (ತಾಲಿ)—ಬೈಸಾರಿ (ಬೆಳಗಿನ ಜಾವ) ಮುಖ ತೊಳೆದ ಕಣ್ಣಿಗೆ ಒಬ್ಬಟ್ಟು (ಸಂತೋಷದ ವಸ್ತು.) ೨. ಅರಿಸಿನ ಹಚ್ಚಿ, ಕುಂಕುಮ ಇಕ್ಕಿ, ಗೆಜ್ಜೆವಸ್ತ್ರ ಮುಡಿಸಿ, ಹೂವನ್ನು ಒಪ್ಪಿಸಿ, ಸುಸೂತ್ರವಾಗಿ ಕರ್ಪೂರ ಹಚ್ಚಿ, ಎಲೆಗೆ ಹಣ್ಣಿಗೆ ತೊಟ್ಟು ಚಿವುಟಿ, ನೀರನ್ನು ಎತ್ತಿ ಎರೆದು, ಮೂರು ಸಲ ಮೈಯಡಗಿ (ಮಲ್ಲಿ) ಕಟ್ಟೆಯನ್ನು ಸುತ್ತಿಬರುವಳು. ೩. 'ತುಳಸಿ! ಮನೆಯ ಗಂಡಸಿಗೆ ಬುದ್ಧಿ ಕೊಡು. ಮೂರು ಹಸುಗೂಸುಗಳಿಗೆ ವಿದ್ಯೆ ಕಲಿಸಿ ಕೊಡು. ನನಗೆ, ಮಾತಾಯಿ, ಮೊದಲು ಭಕ್ತಿ ಕೊಡು, ಮತ್ತೆ ಶಕ್ತಿ ಕೊಡು, ಕಡೆಗೆ ಮುಕ್ತಿ ಕೊಡು. ಕೊಟ್ಟು ನೀನು ಕಾಪಾಡು. ೪. ಮಂಡಿಯನ್ನು ಊರಿ, ನಡು ಬಗ್ಗಿಸಿ, ನೆಲಕ್ಕೆ ಹಣೆಯಿಕ್ಕಿ ಏಳುವ ವೇಳೆಗೆ, ಹಕ್ಕಿ ಹೊಂಚಿದ ಹಾಗೆ ಕಾದಿರುತ್ತವೆ—ಮೂರೂ ಕೂಡಿ ಪೂರ್ವಸುಕೃತ ಎಂಬಂಥ ಗಂಡು ಹೆಣ್ಣು. (ಅವು) ತಾಯಿ ಕೊಡುವ ಹಣ್ಣನ್ನು ನಗುತ್ತಾ ನಗುತ್ತಾ ಕಿತ್ತುಕೊಳ್ಳುತ್ತವೆ. ೫. ಮಲ್ಲಿಗಂತೂ ತುಳಸೀಪೂಜೆ (ಎಂಬುದು) ಕಬ್ಬನ್ನು ಸಿಗಿದ ಹಾಗೆ ಸಿಹಿ. ಮಕ್ಕಳಿಗಂತೂ ದಿನ ಬೆಳಗಾದರೆ, ಹಣ್ಣು ಕಾಯಿನ ಹಬ್ಬ. ಇವರ ಹಬ್ಬವನ್ನೂ ಅವಳ ಕಬ್ಬನ್ನೂ ತುಂಬುವುದಕ್ಕೆ ನನ್ನ ಕಣ್ಣು ಡಬ್ಬ (ಭರಣಿ). (ನಮ್ಮ) ಮೂವರ ಮನಸ್ಸಿನ ದಿಬ್ಬ (ದಿಣ್ಣೆ) ತಗ್ಗು ಬೀಳದೆ ಹೀಗೆಯೇ ಬೆಳೆಯಲಿ.

೯. **ಹಾಲು—ಕೆನೆ**: ೧. ಆಚೆ ಜಡೆ, ಈಚೆ ಜಡೆ, ನಡುವೆ ಹೂವಿನ ಸೇತುವೆ! ಅಕ್ಕ ತಂಗಿ ಕುಳಿತ ಹಾಗೆಯೇ ಕಟ್ಟೆಯ ಮೇಲೆ ಕುಳಿತಿವೆ. ೨. ಈಚೆ ಕಡೆ ಒಂದು - ನನ್ನ ಹುಡುಗಿ, ಆಚೆ—ಆಚೆ ಮನೆಯದು ; ಒಂದೆ

ಕೊಂಬೆ ಕೊನೆಯದಾದ ಜೋಡಿ ಹೂ ಇದ್ದ ಹಾಗೆಯೇ. ೩. ಹುರಿಬಟಾಣಿ ಸಿಪ್ಪೆ ಸುಲಿದು, ಬಾಯಿಗೆ ಎಸೆದುಕೊಳ್ಳುತ್ತ, ಇದ್ದಕ್ಕಿದ್ದ ಹಾಗೆಯೇ ಜಗಳ ಷುರು (ಆರಂಭ): 'ನನ್ನದು! ನನ್ನದು! ತತ್ತ (ಕೊಡು!)' ೪. ಹಿಡಿದು, ಎಳೆದು, ತಳ್ಳಿ, ಪರಚಿ,—ಒಂದೆ ಕಾಳೆ ಕಾರಣ—ಕಿರಿಚುತ್ತವೆ: 'ನಿನ್ನನ್ನು ಸಿಗಿದು ತೋರಣ ಕಟ್ಟುತ್ತೇನೆ!' ೫. ಹೂವು ಕಿತ್ತು, ಮಣ್ಣು ಎರಚಿ, ಒಂದು ಒಂದರ ribbonಅನ್ನು ಸೀಳಿ, ಹೇಳುತ್ತವೆ: 'ನಿನಗೆ ಕೊಬ್ಬನ್ನು ಇಳಿಸು ತ್ತೇನೆ!' ೬. ಹುರಿ ಬಟಾಣಿ ಎರಚಿ ಚೆಲ್ಲಿ—ಬೀದಿಯ ತುಂಬ ಗದ್ದಲ! ಒಂದನ್ನು ಒಂದು ಚಚ್ಚುತ್ತವೆ. ಎರಡು ಬೆನ್ನೂ ಮದ್ದಲೆ. ೭. 'ಅಮ್ಮಾ! ಅಮ್ಮಾ' (ಎಂದು) ಅರಚುತ್ತವೆ; ಕಿವಿ ಕಿತ್ತುಹೋಗುವುದೆ! ಇದಕ್ಕೆ ನಮ್ಮ ಕೇರಿಯ ರೂಢಿ—ಸುಮ್ಮನೆ ಕಿವುಡರಾಗುವುದೆ! ೮. ಅವು ಅವೇ ಹೊಡೆದು ಬಡಿದು, ಹತ್ತು ನಿಮಿಷದ ಹೊತ್ತಿಗೆ, ಜಡೆ ತಿದ್ದಿ, ರಿಬ್ಬನು ಕಟ್ಟಿ, ಮೆಲ್ಲಗೆ ಒಂದಾಗುತ್ತವೆ. ೯. ಹತ್ತು ನಿಮಿಷ ಬಹು ವ್ಯವಹಾರ (ಜಗಳ), ಮತ್ತೆ ಮೊದಲಿನ ಹಾಗೆಯೆ—ಕಾದು ಕುದಿದು ಹಾಲಿನ ಮೇಲೆ ಸಿಹಿ ಕೆನೆ ಕಟ್ಟುವ ಹಾಗೆ! ೧೦. ಈಗ ಕೆಚೆ, ಮತ್ತೆ ತಂಪು (ಇವು) ಚಕ್ರ ತಿರುಗುವ ಮಾದರಿ ಯಲ್ಲಿ (ಈ) ಅವಳಿ ಜವಳಿ ಕುರಿಮರಿ ಒದ್ದಾಡುತ್ತವೆ, ಮುದ್ದಾಡುತ್ತವೆ. ೧೧. ಹೀಗೇ ದಿನವೂ ಬಲು ಸೊಗಸು—ಕಾಸೇ ಕೊಡದೆ, ನಾಟಕ. ನಮ್ಮ ಕೇರಿಯ ತೋಟಕ್ಕೆ ಮಕ್ಕಳು ಇವೇ ಜೀವದ ಹೂವುಗಳು.

೧೦. ಸಿನಿಮಾವಾಲಿ: ೧. ಆಗುವುದಿಲ್ಲ ಮಲ್ಲಿ, ನನ್ನ ಕೈಯಲ್ಲಿ ಆಗು ವುದಿಲ್ಲ ಮಲ್ಲಿ; ಹೆಂಡಿರು (ಆಗಿ) ನಿನ್ನನ್ನು ನಾನು ಕಟ್ಟಿಕೊಂಡು ನಡೆಸುವುದು ಆಗುವುದಿಲ್ಲ ಮಲ್ಲಿ. ೨. ಹೀಗೆ ನಿನಗೆ ವಾರಕ್ಕೆ ಐದು ಸಿನಿಮಾ; ಅಷ್ಟು ರಾತ್ರೆಯೂ ನನಗೆ ತಂಗಳು ನಿಯಮು; ತಿಂದದ್ದು ಎಲ್ಲ ಹೊಟ್ಟೆಯ ಬೂದಿಯಲ್ಲಿ ಹೋಮು; ಕಣ್ಣನ್ನು ತುಂಬುತ್ತ ತೇವ ಒತ್ತುತ್ತದೆ. ೩. ಒಂಟಿಬಡಕನ, ಸುಂಟರಗಾಳಿಯ ಬದುಕು, ನನಗೆ ಆ ಚಾಳಿ ರೂಢಿಯಿಲ್ಲ. (ನಿನಗೆ) ವಾರಕ್ಕೆ ಐದು show (ಎಂದರೆ) ನಾನು ದಿವಾಳಿ. ಎಲ್ಲಿ ಕಲಿತೆಯೇ ನೀನು ಇದನ್ನು, ಮನೆಹಾಳಿ! ೪. ನಿನ್ನ ಚಿಕ್ಕ ಮಗನದು ಚೆಡ್ಡಿಯನ್ನು ನೋಡು; ದೊಡ್ಡವ ನದರಲ್ಲಿ ಏನೂ ಸಂದು (ಹರಕು) ಕಡಮೆಯಿಲ್ಲ; ಮಗಳ ಲಂಗವನ್ನಾದರೂ ನೋಡಬಾರದೆ ಬಂದು? ಸಿನಿಮಾಗೆ ನಾನು ಎಲ್ಲಿ ತಂದು ಸುರಿಯಲಿ?

೫. ಗಂಟೆ ಗಂಟೆ ಆ ಕ್ಯೂನಲ್ಲಿ ಕಾದು, (ನಿನ್ನ) ಮುಖದ ಬಣ್ಣ ನೋಡು— ಅಪ್ಪಟ (ಶುದ್ಧ) ಸಾದು! ಸಿನಿಮಾ ಜಾದು (ಮೋಹ) ಜೇಡನ ಬಲೆಯಲ್ಲಿ ನೊಣ (ಸಿಕ್ಕಿದ ಹಾಗೆ). ಆ ಹಾದಿಯಲ್ಲಿ ಹಾದುಹೋಗಬೇಡ, ಮಲ್ಲಿ. ೬. ಸಿನಿಮಾ ವಾಲಿ (ಸಿನಿಮಕ್ಕೆ ಗಂಟುಬಿದ್ದವಳೆ,) ನಾನು ನಿನಗೆ ದಾಸನಾಗಿ, ದವಾಲಿ (ಸೇವ ಕನ ಪಟ್ಟೆ)ಯನ್ನು ಧರಿಸಿ, ನಿನ್ನ ಹಿಂದೆ ಮುಂದೆ (ಇದ್ದೇನೆ.) ಯಾವ ಗಳಿಗೆಯಲ್ಲಿ ನಿನಗೆ ತಾಲಿ ಕಟ್ಟಿದೆನೋ, ಹೆಣ್ಣೆ, ನನ್ನ ಜೀವ ನಿನಗೇ ಹವಾಲಿ(ಅರ್ಪಿತ ಆಗಿದೆ.)

೧೧. ಊರಿನ ಆಚೆಗೆ ಹೋಗಿ: ೧. ಕೈಕೂಸನ್ನು ಎತ್ತಿ ಸೊಂಟ ದಲ್ಲಿ ಸಿಕ್ಕಿಸಿಕೊ; ನಡುವಿನವನಿಗೆ ನನ್ನ ಹೆಗಲು; ನೆತ್ತಿಯನ್ನು ಹಿಡಿದು ಕೊಳ್ಳೊ. ೨. ಹಿರಿಯ ಮಗ ರುಸ್ತುಂ, ಅಣ್ಣ! ಹೆಜ್ಜೆ ಮೇಲೆ ಹೆಜ್ಜೆ (ಇಟ್ಟು) ನಡೆದ ಎಂದರೆ—ಚೆಡ್ಡಿಯಿಂದ ಆಚೆಗೆ ಬೊಜ್ಜೆ ಜಗ್ಗುತ್ತದೆ. ೩. ಹಸುಮಗು ವಿಗೆ ಹಾಲು—ಇದೋ—ಗಾಜುಬುಡ್ಡಿಯಲ್ಲಿ ತುಂಬಿದ್ದೇನೆ. (ನಡುವಿನವ ನಿಗೆ): 'ಅಂಟು—ತಲೆಗೆ ಒರೆಸೀಯೆ! ತೆಗೆದುಕೊ—ಸಕ್ಕರೆ ಕಡ್ಡಿ.' ೪. ಹಿಡಿ ದುಕೊ ಬಾ ಮರಿಗಣಪ, ಇದನ್ನು, ತಿಂಡಿಗಂಟನ್ನು. ಈ ಪೆಪ್ಪರಮೆಂಟನ್ನು ದವಡೆಯಲ್ಲಿ ಒತ್ತರಿಸಿಕೊ. ೫. ರಥ ನೇರವಾಗಿ ನಡೆಯಲಿ—ನಾನೂ ನೀನೂ (ಮಲ್ಲಿ) ಚಕ್ರ; (ಹಿರಿಯವ) ನೀನು ಮುಂದುಗಡೆ ಸಾರಥಿ! ಎಲ್ಲಿ ನೋಡುತ್ತೀ ಬಕ್ರ (ಕುರಿಯೆ?) ೬. ನಡುರಸ್ತೆ ನಡೆಯಬೇಡವೊ—ಕಾರು ಲಾರಿ ಗಾಡಿ! ಫುಟ್‌ಪಾತಿನ ಮೇಲೆ, ಹಾಗೆಯೆ ನಡೆ, ಜನ ದನ ನೋಡಿ. ೭. ಎಲ್ಲಿ ಎಂದರೆ ಅಲ್ಲೆ, ಹೇಗೆ ಅಂದರೆ ಹಾಗೇ, ಉಗಳು, ಶಿಂಬಳ, ಹೇಸಿಗೆ! ದನಕೆ ಹೇಗೆಯೋ ಜನಕ್ಕೂ ಹಾಗೆಯೇ, ಉಚ್ಚಿದ (ಹೊಲಸುಮಾಡಿಕೊಂಡ) ಅಲ್ಲೇ ಹಾಸಿಗೆ! ೮. ದೇವರ ರಥ, ಜಾತ್ರೆ, ಧಾತ್ರೀಹವನ (ಇವು ಎಲ್ಲ) ಹಳೆಯ ಕಥೆ (ಆದುವು); ಕಾಕಡ (ಇದೊಂದು ನಿರ್ಗಂಧಕುಸುಮ) ಬೆಳೆದು, ಪಚ್ಚೆತೆನೆ ಮರುಗ ದವನ (ಮುಂತಾದುವು ಹೇಗೆ) ಮರೆತು ಹೋಯಿತು (ಹಾಗೆ.) ೯. ಹಳ್ಳಿ ಹೋಯಿತು, ಪಟ್ಟಣದ ಬಾಯಿಗೆ ಬಿದ್ದು ಹಾಳಾಗಿಹೋದೆವು; ಮುಳುಗಿ ಹೋಗದ ಹಾಗೆ ತೇಲುತ್ತ ಇರಬೇಕಾದರೆ, (ಆಗಾಗ್ಗೆ ಪಟ್ಟಣವಾಸವನ್ನು) ಹೀಗೆ ಒದ್ದು ಹೋಗುವುದೆ ಮದ್ದು. ೧೦. ಅದೊ! ನೆಲ, ಆಕಾಶ, ಬಯಲು, ನೀರು, ವೃಕ್ಷ (ಎಲ್ಲ) ಕರೆಯುತ್ತವೆ! ಬನ್ನಿ—(ಪ್ರಕೃತಿಯೆಂಬ) ಭವತಿ (ತಾಯಿ) ಹಾಕುವ ಭಿಕ್ಷ(ಕವಳ)ವನ್ನು ಜೀವ ಎತ್ತಿಕೊಂಡು ಬರಲಿ.

೧೨. ಬೆಕ್ಕು ಬಂತು ಬೆಕ್ಕು: ೧. ಮಗಳನ್ನು ಕಾಲೇಜಿಗೆ ಕಳು ಹಿಸುತ್ತಾಳಂತೆ! 'ನೀನು ಅವಳ ಗೋಜಿಗೆ ಹೋಗದಿರು!'—ಇದು ನನಗೆ ತಾಕೀತು (ಆಜ್ಞೆ.) ಹುಡುಗಿಯನ್ನು ಹೀಗೆಯೇ ಬೆಳೆಸಿದರೆ, ಇದು '(ಇವನು ನನಗೆ) ಅಪ್ಪ' ಎಂದು ಅನ್ನವಿಟ್ಟು ಹೇಗೆ ಸಾಕೀತು? ೨. (ಮಲ್ಲಿಗೆ): 'ಬಿಡೆ, ಬಿಡೇ! ನೆಟ್ಟಗೆ ಇನ್ನೂ 'ಅ ಆಟ' (ಎಂದು) ಓದಿ ಬರೆಯುವುದಕ್ಕೆ ಬರುವು ದಿಲ್ಲ! ಮೊದಲು ಪಾವುಡೆ (ಲಂಗ) ಕಟ್ಟುವುದನ್ನು ಕಲಿಸಿಕೊಡು. ಕಾಲೇಜು ಆಮೇಲೆ! ೩. ಏ ಎನ್ನಬಾರದು, ಲೇ ಎನ್ನಬಾರದು, ಅಮ್ಮ ಎನ್ನಬೇಕು— ಈ ಇದನ್ನು, ಪುಟ್ಟ ಲಂಕಿಣಿಯನ್ನು! ಮಕ್ಕಳೇ ಹೂವಂತೆ! ಮಾಲಿ (ತೋಟ ಗಾರ) ನಾವಂತೆ! ಮನೆ ತೋಟವಂತೆ! (ಏನೂ) ಅನ್ನಬಾರದಂತೆ ಈ ಗಿಣಿ ಯನ್ನು! ೪.(ಮಗಳಿಗೆ): 'ಬಾ ಗಿಣೀ! ಬಾಮ್ಮ! ಮುದ್ರಾಮು! ಮುದ್ರಾಮು! ಬೆಕ್ಕು ಬಂತು ಬೆಕ್ಕು!' ಮಲ್ಲಿಯ ಮುಖ (ಸಂತೋಷದಿಂದ) ಮೊರದ ಅಗಲ (ಆಯಿತು). ಐವರೂ ನಕ್ಕು ನಕ್ಕು, ಮನೆಯ ತುಂಬ ಗದ್ದಲ(ತುಂಬಿತು!)

೧೩. ಕವಿತೆಯ ಗುರಾಣಿ: ೧. "ಯಾರೇ ನೀನು? ನನ್ನ ಮಲ್ಲಿಯ ಮೂಗಿನ ಹಾಗೆ ಮೂಗನ್ನು ಇಟ್ಟುಕೊಂಡು ಮೆರೆಯುತ್ತೀಯೆ?" "ಯಾರೋ ನೀನು? ಹೆಣ್ಣು ಹೆಂಗುಸಾದ ನನ್ನನ್ನು ಹೀಗೆ 'ನೀನು, ತಾನು' ಎಂದು ಕರೆಯುತ್ತೀಯೆ?" ೨. "ಮತ್ತೆ? ನನ್ನ ಮನೆಯ ಹೊಸಿಲು ದಾಟ (ಬಂದಿರು ವವಳು) ನೀನು ಯಾರೆ? ಯಾರ ಮನೆಯ ಗರತಿ?" "ಹತ್ತು ವರ್ಷ ನನ್ನ ಮುತ್ತಿನ ಸಂಸಾರ—ಅಪ್ಪಾ, ಎಷ್ಟು ಬೇಗ ಮರೆತೆ!" ೩. "ಏನೇ ಮಲ್ಲಿ ಇದು, (ನಿನ್ನ) ಹೊಸ ಅವತಾರ? ಷರಟು ಷರಾಯಿನ ವೇಷ?" "ಷರಟು ಅಲ್ಲ, ಇದು ಷರಾಯಿ ಅಲ್ಲ; ನಮ್ಮದು ಪಂಜಾಬೀ ದೇಶ." ೪. "ಷರಟು ಅಲ್ಲ, ಕಣಪ್ಪ; ಆ (ಪಂಜಾಬಿ) ಮಂದಿ ಈ ಕುಡತಕ್ಕೆ 'ಪೈರನ್' ಎನ್ನುತ್ತಾರೆ; ಈ ಷರಾಯಿಗೆ 'ಸುರ್ವಾಲ್' ಮತ್ತು 'ಗಾಗರ' ಎಂದು ಎನ್ನುತ್ತಾರೆ." ೫. "ಒಲ್ಲಿ ಹೊದ್ದ ಹಾಗೆ, ಎದೆಯ ಮೇಲೆ ಇದು?" "ಇದು 'ಡಾವಣಿ', ಇದು 'ದುಪ್ಪಟ್ಟ'!" "ಭಲಾ ಮಲ್ಲಿ! ನಿನ್ನ ಕನ್ನಡ ಮರೆತುಬಿಡು—(ನೀನು) ಥೇಟು ಅಪ್ಪಟ (ಶುದ್ಧ) ಪಂಜಾಬಿನೇ! ೬. "ಎಲ್ಲಿ? ತಿರುಗು ಮಲ್ಲಿ! ಎಲ ಎಲ ಹುಡುಗಿ! ಎಲ್ಲಿಗೆ ಇಳಿಯುತ್ತದೆ ಎರಡು ಜಡೆ! ಕಿಟಕಿಯ ಬೆಳಕಿನಲ್ಲಿ— ನೋಡೋಣ ಮಲ್ಲಿ—ಎಲ್ಲಿ, ಆ ಕಡೆಯಿಂದ ಈ ಕಡೆಗೆ ನಡೆ!" ೭. "ಕುಲುಕು

ಬಳುಕು (ಅಮ್ಮಾ!) ಒನಪು ಒಯ್ಯಾರ (ಎಲ್ಲ) ಕನ್ನಡಿಯ ಹಿಂದಿನಿಂದ ಕಂಡ ಹಾಗೆ (ಸ್ಪಷ್ಟವಾಗಿ) ಅಲೆಯಲೆ ಅಲೆಯಲೆ ತೇಲಿಬರುತ್ತದೆ! (ಇದು) ನಿನಗೆ ಚೆನ್ನಾಗಿ ಒಪ್ಪುತ್ತದೆ. ೮. "ನೀನು ಏನೇ ಹೇಳು; ಪಂಜಾಬಿ ಬಟ್ಟೆಯ ತೆರ ಬೇರೆ; (ಅದು) ಕಣ್ಣನ್ನು ಕೆಣಕುತ್ತದೆ. ಅವರಿಗೆ ಅವರದು, ನಮಗೆ ನಮ್ಮದು ಅರಳೇಪೇಟೆ ಸೀರೆ, ಗೌರವ. ೯. "ಒಳಗೆ ಕುಪ್ಪಸ, ಬೆನ್ನು ಮುಚ್ಚುವ ಸೆರಗು, ಮುಂದೆ ಸಿರಿಯ ಗಗನಚುಕ್ಕಿ! ಚೆಲ್ಲು (ಗಂಭೀರವಲ್ಲದ) ಈ ವೇಷವನ್ನು ಒಳಗಿರಿಸಿ, ಮತ್ತೆ ಮಂಗಳಗೌರಿ(ಯಾಗಿ) ಮೆರೆದು ಬಾ. ೧೦. 'ನಿನ್ನ ಕಂಕುಳ ಅಡಿಗೆ ಸೆರಗು ಹಾಯುವ ಆ ಬಿಗುಪು ಅದೆ ಸಾಕು— ಜುಮುಜುಮ್ಮು (ಎನ್ನಿಸುವುದಕ್ಕೆ); ಇಳಿದ ಸೆರಗಿನ ಮರೆಯಲ್ಲಿ ದುಂಡಗಿರುವ ತೋಳು, ರವಿಕೆಯ ರೇಖೆ—ಅದೇ ನಿನ್ನ ಹೊಮ್ಮು. ೧೧. "ಏನೇ ಮಲ್ಲಿ? ನಮ್ಮ ಮಗ್ಗಲು ಮನೆಗೆ ಹೊಸದು ಪಂಜಾಬಿ ಸಂಸಾರ (ಬಂದಿದೆಯಲ್ಲ)— ಹೌದು, ಆ ಅಮ್ಮನನ್ನು ಕೇಳಿ, ಈ ಒಲ್ಲಿ ಷರಟು ಇಜಾರ (ಷರಾಯಿ) ತಂದೆಯ? ೧೨. "ನಿನ್ನ ಸೀರೆಯನ್ನು ನೀನು ಆಕೆಗೆ ಉಡಿಸು. ಇಂಥದನ್ನು ಸಾಲ ಮಡಗಿ(ಇರಿಸಿ)ಕೊಬೇಡ. ಅಕ್ಕಪಕ್ಕದವರು ಅಕ್ಕತಂಗಿಯರಂತೆ ಇರಿ, ಕಂಡೆಯಾ—ಕೆಟ್ಟುಹೋಗಿದೆ ಕಾಲ. ೧೩. "ಮತ್ತೆ, ಮಲ್ಲಿ, ನಾನು ಹೀಗೆ ಹೇಳಿದ್ದಕ್ಕೆ ರೋಷಮಾಡಿಕೊಳ್ಳಬೇಡ; ಬಟ್ಟೆ ಎಂಥದೇ ಇರಲಿ, ಇಲ್ಲದೆ ಇರಲಿ, ನೀನು ಏನೆ ಮಾಡು—ಅದು ಸಂತೋಷ. ೧೪. "ಏಕೇ ಮಲ್ಲಿ? ನಾನು ಏನು ಹೇಳಿದೆನೆ? ನನ್ನ ಮೂತಿ ಏಕೆ ತಿವಿಯುತ್ತೀಯೆ? ಗಂಡುಬೀರಿ! ನಿನಗೆ ಎದುರು ಗುರಾಣಿ (ನನಗೆ) ಇದು ಒಂದೇ—ನನ್ನ ಕವಿತೆ!"

೧೪. ಆದಿತ್ಯವಾರ ಬಂತು: ೧. ಬಂತು, ಬಂತು, ಆದಿತ್ಯವಾರ ಬಂದಿತು. ಮನೆಯಲ್ಲಿ ಕುಳಿತು ಹಾಯವಾಗಿ (ನೆಮ್ಮದಿಯಿಂದ) ಇರಬಹುದು. ೨. ಕೋಳಿ ಕೂಗುವುದಕ್ಕಿಲ್ಲ–ಒಲೆಗೆ ಉರಿಯನ್ನು ಹಾಕಿ—ಶಾರೆ (ಅಂಗೈಯ) ತುಂಬ ಎಣ್ಣೆಯನ್ನು ನನ್ನ ತಲೆಗೆ ತಟ್ಟಿ—ಬಿಸಿ ಕುದಿಯುವ ನೀರನ್ನು ರಪರಪಾ (ಎಂದು) ರಾಚಿದರೆ (ತೆಗೆದು ಹುಯ್ದರೆ)—ಮತ್ತು (ಅಮಲು, ಅಥವಾ ಮತ್ತೆ, ಎಂದರೆ ಪುನಃ) ಬಂದು ಮಲಗಿದರೆ—(ಏಳುವ ವೇಳೆಗೆ) ಒಂಬತ್ತು ಪೂರ್ತಿ! ೨. ಒಂಬತ್ತು (ಗಂಟೆಗೆ)—ಬಿಸಿ ಕಾಫಿ! ಹತ್ತಕ್ಕೆ ಉಪ್ಪಿಟ್ಟು! ಹನ್ನೆರಡಕ್ಕೆ ಎಸರು (ಸಾರಿನ) ಜೊತೆಗೆ ಬಿಸಿ ಮುದ್ದೆ ಹಿಟ್ಟು! ಮತ್ತೆ ಮಕ್ಕಳ ಕೂಡೆ ಅವರ

ಆಟಪಾಟ! ಮಲ್ಲಿಯ ಸಂಗಡ ದಕ್ಕಿಬಾರ, ಹುಲಿಕುರಿ (ಮುಂತಾದ ಆಟ.) ೪. ಸಂಜೆಗೆ, ಅಣ್ಣಮ್ಮ (ದೇವರಿ)ಗೆ ತಟ್ಟೆ ತಂಬಿಟ್ಟು! ಅದನ್ನು ಅಲ್ಲೇ ಭಿಕ್ಷದವರಿಗೆ ಇಷ್ಟಿಷ್ಟು ಹಂಚಿ(ಬಿಡುವುದು)! ರಾತ್ರೆ ಮನೆಯಲ್ಲಿ ಹಾರ್ಮೋನಿಯಂ ಹಿಡಿದು, ಭಜನೆ! ನಿದ್ರೆ ಹತ್ತುವವರೆಗೆ ಕಥೆ ಹೇಳುವ ಮಜವೆ (ಸೊಗಸೇ ಸೊಗಸು.) ೫. ಆದಿತ್ಯ! ಸೂರ್ಯ! ನೀನು ನಮಗೆ ತಂಪು ದೀಪ! ಮಿಕ್ಕ ದಿನ ಏನೇ ಇರಲಿ (ಅವು) ಕತ್ತಲೆ, ತಾಪ! ಈ ಒಂದು ದಿನವೇ—ನಾನು ಬಿಟ್ಟದ್ದೇ ಬಾಣ! ನಾಳೆಯಿಂದ ಹೇಗೂ ಅದೇ ಹಳೇ ಗಾಣ!

೧೫. ಪ್ರಾಯ ತಂದ ಒಡವೆ: ೧. ಮೊದಲು (ನಿನ್ನನ್ನು) ಕಂಡಾಗ, ಮಲ್ಲಿ, ನಿನ್ನ ಕೆನ್ನೆಯ ಮೇಲೆ ಒಂದು ಮಡವೆಯಿತ್ತು! ಅದು ದೃಷ್ಟಿ ಬೊಟ್ಟಿನ ಹಾಗೆ ಇತ್ತು! ಚಿನ್ನಾ, (ನನಗೆ ಅದು) ಇನ್ನೂ ಜ್ಞಾಪಕ ಇದೆ! ೨. ಇಲ್ಲೆ, ಈ ಕಡೆ, ಈ ಕೆನ್ನೆಯ ಗುಳಿಯ ಮೇಲೆ ಪುಟ್ಟ ಕೆಂಪು ಬುಗುಟು (ಇತ್ತು.) ಕೈಯನ್ನು ಹಾಗೆ ಏಕೇ ಕೊಸರಿ (ತಳ್ಳಿ) ಕೊಡಹುತ್ತೀಯೆ? ಜಿಗುಟು! ಜಿಗುಟು! ಜಿಗುಟು! ೩. ಹಳೆಯ ಸಂಗತಿಯನ್ನು—ಮುಖದ ಮುದ್ದು ಮಡವೆಯನ್ನು—ನಾನು ಹೇಗೆ ಮರೆಯಲೆ, ಮರಿ? (ಆ) ವಯಸ್ಸಿಗೆ ಅದೆ ಮಂಗಳ ಲಕ್ಷಣ! (ಅದೆ) ಪ್ರಾಯ ತಂದ ಒಡವೆ! ೪. ನಾಚಿಕೆ ಆಗುತ್ತದೆಯೆ? ತಲೆ ಎತ್ತು ಮಲ್ಲಿ, ಮಕ್ಕಳು ಇಲ್ಲ ಇಲ್ಲಿ; ಆಡುವುದಕ್ಕೆ ಹೋಗಿವೆ; ಬೀದಿಯ ನೀರಿನ ನಲ್ಲಿ ನೆನಪು ಬರುತ್ತದೆಯೆ? ೫. ಸೂರ್ಯ ಇಳಿದು ಬಂದು, ಸಂಜೆಯ ಚಿನ್ನವನ್ನು ಸವರಿ, ನಿನ್ನ ಮುಖವನ್ನು ತಿದ್ದುತ್ತಿದ್ದ! ಮಲ್ಲಿ, ನಿನ್ನ ಕೆನ್ನೆ, ಆಗ ಈಗಿಗಿಂತ ತುಂಬಿ ದುಂಡಗೆ ಇತ್ತು. ೬. ನಿಜವೆ, ಆಗ ನೀನು ಹುಡುಗಿ; ಈಗಲಾದರೋ ಮೂರು ಮಕ್ಕಳ ತಾಯಿ. ಏನೇ ಆದರೂ, (ನಿನ್ನ) ಕಣ್ಣು ಮೂಗು ಬಾಯಿ (ಈಗಲೂ ಹಿಂದಿನ) ಹಾಗೆಯೇ ಕೆಣಕುತ್ತದೆ. ೭. ತೆಗೆದು ನುಂಗುವ ಹಾಗೆ ಕಣ್ಣನ್ನು ಏಕೆ ಹಾಗೆ ಬಿರಬಿರನೆ ಬಿಡುತ್ತೀಯೆ? ಕೋಪಿಸಿಕೊಂಡರೆ ನೀನು ಬಹು ಮುದ್ದಾಗುತ್ತೀಯೆ—(ಬೇಕಾದರೆ) ಹಾಗೇ ಕನ್ನಡಿ ನೋಡಿಕೊ! ೮. ಇದೆ ಕೊ ಮಲ್ಲಿ, ಒಸಿ (ಸ್ವಲ್ಪ) ಎಲೆ ಅಡಿಕೆ; ತುಟಿಗೆ ರಂಗು ಬರಲಿ, ಕೊಳ್ಳೆ! ಕುಂಕುಮ ತಿದ್ದಿಕೊ; ಅದೋ, ದೊಡ್ಡಮಗನ ಸಿಳ್ಳೆ ಕೇಳಿಸುತ್ತದೆ.

೧೬. ಮುತ್ತೈದೆ ಸಾವು: ೧. ನನ್ನ ತಂಗಿಯ ಮದುವೆ; ಮಕ್ಕ

ಳನ್ನು ಕರೆದುಕೊಂಡು ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಹೋಗಿದ್ದೆವು. ೨. ಮದುವೆಯಾದ ಮೇಲೆ, ಇಳಿದು ಬರುವಾಗ, ನನ್ನ ಕಿವಿಯಲ್ಲಿ ಹೀಗೆ ಎಂದಳು ಮಲ್ಲಿ: 'ತಾಯಿಯ ಪಾದಕ್ಕೆ ನಾಲ್ಕು ಹೂವು ಹಾಕಿ ಬರಬೇಕು. ನೀವೂ ಬನ್ನಿರಿ.' ೩. ಗುಡಿಗೆ ಹೋದೆವು; ಅಮ್ಮನವರ ಅಡಿಗೆ ದೇವಿಕೆರೆ ಸಂಪಗೆಯ ಒಂದೆರಡು ಪೊಟ್ಟಣವನ್ನು ಪೂಜೆಮಾಡಿಸಿ, ಮಲ್ಲಿ ಏನೇನೊ ಪಠಣ ಮಾಡಿದ್ದು ನೋಡಿ—'ಎಲಾ, ನನ್ನನ್ನು ಜೋಡಿ (ಸಂಗಡ) ಕರೆದು ಕೊಂಡು ಇಲ್ಲಿಗೆ ಬಂದದ್ದು ಏಕೆ? ಸುಮ್ಮನೆ ಹೀಗೆ ಕಾವಲು ಹಾಕುವು ದಕ್ಕೇನು?' ಎಂದು ನನಗೆ ಎನ್ನಿಸಿತು. (ನನಗೋ) ಮಸ್ತು (ತುಂಬಾ) ಬೇಸರ. ೪. ಬಸವಣ್ಣನನ್ನು ಬಿಟ್ಟು ಇಳಿಯುವಾಗ ಕೇಳಿದೆ: 'ನನ್ನ ಮಲ್ಲಿ! ಅಮ್ಮನ ಹತ್ತಿರ ಏನು ಗುಟ್ಟು ಹೇಳಿದೆ?' ೫. "ಹೆಂಗಸರು ಹೆಂಗಸರ ಮಾತು. ಬಿಡಿ, ಗೌರೀ ದುಃಖ ಗಂಡಸರಿಗೆ ಏಕೆ? ಮಕ್ಕಳನ್ನು ಕರೆದುಕೊಳ್ಳಿ." "ನಾನು ಅರ್ಧನಾರಿ. ನಿನ್ನ ಗುಟ್ಟನ್ನು ಬಿಡಿಸಿ ಇಕ್ಕು (ಇರಿಸು.)" "ಒಂದು ಸಣ್ಣ ಚಿಕ್ಕ ವರ ಕೇಳಿಕೊಂಡು ಬಂದೆ." ೬. "ಏನು ವರ? ಯಾರಿಗೆ?" "ನಿಮಗೆ, ನನಗೆ! ಮತ್ತೆ, ಮೂವರು ಮಕ್ಕಳಿಗೆ!" ೭. "ನನಗೆ ಏನು, ಮಲ್ಲಿ?" "ನಿಮಗೆ ಆಯುಸ್ಸು, ನಿಮಗೆ ಆರೋಗ್ಯ!" "ಮತ್ತೆ, ಮಕ್ಕಳಿಗೆ (ಏನು)?" "ಅವುಗಳಿಗೆಲ್ಲ—ಗುಣ, ವಿದ್ಯೆ, ಭಾಗ್ಯ!" "ನಿನಗೆ, ಮಲ್ಲಿ?" "ನನಗಾ—ಮುತ್ತೈದೆ ಸಾವು!" (ಅದನ್ನು ಕೇಳಿ, ಮೈಯ) ಮೇಲೆ ಹಾವು ಹೋದ ಹಾಗೆ ಬುಳುಬುಳೂ ಎಂದಿತು ಮೈ. ೮. "ಈ ಕಡೆ ಬಾ, ಮಲ್ಲಿ. ಕುಳಿತುಕೋ ಇಲ್ಲಿ. ಮಹಾತಾಯಿಯ ತಾವು (ಹತ್ತಿರ) ಮುತ್ತೈದೆ ಸಾವು (ಬೇಕೆಂದು) ಕೇಳಿಕೊಂಡು, ನಿನಗೇನೋ ಬಾಯಲ್ಲಿ ಜೇನು! ಕಣ್ಣುಮುಚ್ಚಿ ನೀ ಹೋದೆ—ನನ್ನ ಗತಿಯೇನು?" [ಎಂದು ನಾಗ ಮಲ್ಲಿಗೆ ಒಂದು ಕತೆ ಹೇಳುತ್ತಾನೆ.] ೯. ಒಂದು ಕತೆ, ಕೇಳು: ರುರು ಎಂದು (ಒಬ್ಬ) ಆಳು (ಮನುಷ್ಯ.) ಋಷಿ, ಋಷಿಯ ಮಗ; ರೂಪೊ—ಓ ಮದನ! (ಭಾರತದ ಮೊದಲಿನಲ್ಲಿ ಇದನ್ನು ಹೇಳುತ್ತಾರೆ.) ಇವನಿಗೆ ಒಬ್ಬಳು ಹೆಣ್ಣು. ಹೆಣ್ಣೇನು—ಕಣ್ಣು! ಇವನಿಗೆ ಹಣೆಗಣ್ಣು! ಅವಳ ಹೆಸರು ಪ್ರಮದ್ವತಿ. ಅವಳ ಎದುರು, ಇಂದ್ರನ ಹೆಂಗಸರು ಕೆಸರು. ಆ ಪ್ರಮದ್ವತಿ ರೂಪದಲ್ಲಿ ರತಿ, ಗುಣದಲ್ಲಿ ಪಾರ್ವತಿ, ವಿದ್ಯೆಯಲ್ಲಿ ಸರಸ್ವತಿ! ೧೦. ಇಂತಹವಳನ್ನು ಋಷಿ ರುರು ಮನಸಾರೆ

ಮೆಚ್ಚಿ—ಇನ್ನೇನು ಮದುವೆ—(ಅಷ್ಟರಲ್ಲಿ) ಹಾವು ಕಚ್ಚಿ, ಪ್ರಮದ್ವತಿ ಸತ್ತಳು. ಪಾಪ, ರುರುವಿನ ಗೋಳಾಟ (ಹೇಳುವುದು) ಬೇಡ. ಅವನ ಸಂಕಟದ ಬೆಂಕಿ ಹಬ್ಬಿ, ಹರಡಿ, ಅದು ಭೂಮಿಯನ್ನು ಆವರಿಸಿ, ಆಕಾಶವನ್ನು ಮುಟ್ಟಿ, ಸ್ವರ್ಗದ ತಾವು (ಹತ್ತಿರ) ನಿಂತು, ನಾಲಗೆ ಚಾಚಿ,—ಆ ಕಾವು ಇಂದ್ರನಿಗೂ ತಟ್ಟಿತು. ೧೧. ಇಂದ್ರ ನೋಡಿದ! "ಎಲ ಎಲಾ! ಇವನ ಹೆಣ್ಣನ್ನು ಹಾವು ಕಚ್ಚಿ ಕೊಂದರೆ, ನನಗೆ ಏಕೆ ಈ ತಾಪ, ತೊಂದರೆ?" (ಎಂದುಕೊಂಡ.) ೧೨. ನನ್ನ ಮಲ್ಲಿ, ಇಂದ್ರ(ನಾದ) ಅವನು ಧರ್ಮರಾಜ. ಎಲ್ಲಿ ಅನ್ಯಾಯ ನಡೆದರೆ, ಯಾರು ಎಲ್ಲಿ ಸಹಾಯ ಬೇಡಿದರೆ, ಅಲ್ಲಿ ಅವನಿಗೆ ತಾಪ ತಟ್ಟುವುದೆ ಸಹಜ! ೧೩. ರುರು ಇದ್ದ ತಾವಿಗೆ (ಸ್ಥಳಕ್ಕೆ) ಇಂದ್ರ ಇಳಿದು ಬಂದ. "ರುರು, ನನ್ನನ್ನು ನೀನು ಕರೆದದ್ದು ಏಕೆ?" ಎಂದ. "ಪ್ರಮದ್ವತಿ—ನನ್ನ ಜೀವ- ಹೋಯ್ತು—ನಾನು ಸತ್ತೆ!" "ಸರಿ; ಅದಕ್ಕೆ ನಾನು ಏನು ಮಾಡಲಾಗುತ್ತದೆ?" "(ಸತ್ತು) ಹೋದ ನನ್ನ ಹೆಣ್ಣನ್ನು ಮತ್ತೆ ಬದುಕಿಸಿಕೊಡು!" "ಅದುಮಾತ್ರ ಆಗುವುದಿಲ್ಲ, ಅಣ್ಣ!" "ಹೆಣ್ಣನ್ನು ಕಳೆದುಕೊಂಡ ತಾಪವನ್ನು ತಡೆಯಲಾರೆ, ಇಂದ್ರ!" "ಹೀಗೆ ಹಠ ಹಿಡಿದೆ ಎಂದರೆ, ನನಗೆ ಬಹು ಕೋಪ!" ೧೪. ಪಾಪ, ರುರು ತನ್ನ ಪ್ರಮದ್ವತಿಯನ್ನು ಮರೆಯಲಾರ. ಇಂದ್ರ ಅವನ ಆ ವ್ಯಥೆಯನ್ನೆಲ್ಲ ಬಲ್ಲ. ಇವನ ದುಃಖವನ್ನು ನೋಡಿ ಅವನಿಗೂ ಕರುಳು ಕುದಿಯುತ್ತದೆ; ಆದರೂ, ಇದರಲ್ಲಿ ಜಳ್ಳು ಎಷ್ಟಿದೆಯೋ, ಕಾಳು ಎಷ್ಟೋ (ಎಂಬುದು) ಇದು ಅವನ ಪರೀಕ್ಷೆ. ಮಲ್ಲೀ, ಜನಕ್ಕೆ ಇಂಥ ಶಿಕ್ಷೆ ಏಕೆ ಬರುತ್ತದೆಯೊ! "ಪ್ರಮದ್ವತಿಗೆ ಆಯುಸ್ಸು ಮುಗಿಯಿತಪ್ಪ, ರುರು. ಒಂದು ದಫ (ಸಲ) ಮುಗಿದದ್ದು ಮತ್ತೆ ಹೇಗೆ ಷುರು (ಆರಂಭವಾದೀತು?) ಒಂದು ಉಪಾಯ ಇದೆ: ನಿನ್ನ ಆಯುಸ್ಸಿನಲ್ಲಿ ಇಷ್ಟನ್ನು ನೀನು ಕೊಟ್ಟರೆ . . . ಬಿಡು ಬಿಡು, ಅದು ಬಹಳ ಕಷ್ಟ!" ಎಂದು ಇಂದ್ರ ಹೇಳಿದ. ೧೫. ಆಗ, ಮಲ್ಲಿ, ಮೋಡಬಿಟ್ಟ ಚಂದ್ರ ತಂಪಾದ ಬೆಳುದಿಂಗಳನ್ನು ಚೆಲ್ಲುವುದಿಲ್ಲವೇ ಹಾಗೆಯೇ ಮುಖದ ಅಂಗಳವನ್ನು ಬೆಳಗಿಸುತ್ತ ರುರು ಎಂದ: "ನನಗೆ (ನನ್ನನ್ನು) ಹೀಗೆ ಕೇಳಬೇಕೆ? ಪ್ರಮದ್ವತಿ ಸತ್ತುಹೋಗಿ ನಾನು ಒಂದು ನೂರು ವರ್ಷ ಬದುಕಿರುವುದಕ್ಕಿಂತ—ನನ್ನ ಆಯುಸ್ಸಿನ ಅರ್ಧ ಧಾರೆ ಎರೆಯುತ್ತೇನೆ. ಅವಳನ್ನು ಬೇಗ ಕರೆಸು. ಇಷ್ಟೇನು? ಅಷ್ಟೇನು?

ಅರ್ಥ ಇದೆ, ಇದೋ! ಪ್ರಮದ್ವತಿ ನನ್ನ ಪ್ರಾಣ! ನನಗಂತೂ (ಅವಳು) ಬೇಕು!" ೧೭. ಹೀಗೆ ಅವನು ಹಟ ಹಿಡಿದ; ಅದಕ್ಕೆ ಇಂದ್ರ ನುಡಿದ: "ಭಪ್ಪರೇ ಋಷಿ ರುರು! ನಿನ್ನ ಮಾತು ಮಾತ್ರವಲ್ಲ—(ನಿನ್ನ) ಮನಸ್ಸನ್ನೂ ಬಲ್ಲೆ. ನೀನು ಗಂಡುಸಾವಿತ್ರಿ, ಅವಳಂತೆ (ನೀನೂ) ಸಾವಿನ ಎಲ್ಲೆಯನ್ನು ದಾಟಿದೆ. ನನಗೂ ಹೃದಯ ಇದೆ—ಅದು ಏನು ಗೋಳಿಗೆ ಕರಗದ ಕಲ್ಲೆ? ನಿನ್ನ ಪ್ರಮದ್ವತಿಯನ್ನು ಮತ್ತೆ ಬದುಕಿಸಿಕೊಂಡೆ! ಅದೊ ನೋಡು, ಅಲ್ಲೆ ನಿಂತು!" ೧೮. ಪ್ರಮದ್ವತಿ ರುರುವಿನ ಹತ್ತಿರಕ್ಕೆ, ಒಳ್ಳೆಯ ನಿದ್ರೆ ತಿಳಿದ ಹಾಗೆ, ಎದ್ದುಬಂದಳು; ನಂಬಲಾರದ ಪುಣ್ಯ—ರುರು ಆಗ ಆಕ್ಷಣ ಗಾಳಿಯಲ್ಲಿ ಬಾಳೆಯ ಪತ್ರ(ಎಲೆ ಸಿಕ್ಕಿದ ಹಾಗೆ ಕಂಪಿಸಿಹೋದ!) ೧೯. ಇತ್ತ ಮದುವಣಿಗ ರುರು ನಿಂತ—ಎದುರು ಅತ್ತ ಮದುವಣಿಗಿತಿ ಪ್ರಮದ್ವತಿ; ಇಂದ್ರ ಹಿರಿಯ ಪುರೋಹಿತ; ಅವನು ಮಂತ್ರ ಹೇಳಿ, ಅವರ ಮದುವೆಯ ಕಥೆ ಆಯಿತು. ೨೦. ಮುಂದೆ, ಪ್ರಮದ್ವತಿ ರುರು, ಮಕ್ಕಳನ್ನು ಪಡೆದು, ಹೀಗೆಯೇ ಅವರ ಸಂಸಾರ ನಡೆದು, ಯಮಧರ್ಮ ಕರೆದಾಗ ರುರು ಎಂದ: "ಸಿದ್ಧ! ಪ್ರಮದ್ವತಿಯ ಕೈಯನ್ನು ಹಿಡಿದು, ಇದೊ ಬಂದೆ!" ೨೧. ಹೀಗೆ, ನನ್ನ ಮಲ್ಲಿ, ಹಿಂದೆ ಗಂಡಹೆಂಡಿರು ಒಟ್ಟಿಗೆ ಬದುಕಿದರು, ಒಟ್ಟೊಟ್ಟಿಗೆ ಸತ್ತರು; ಮುತ್ತೈದೆಯ ಸಾವಂತೆ! ಮಂಕುಮೂದೇವಿ! (ಚಾಮುಂಡಿ) ಅಮ್ಮನನ್ನು ಈಗಲಾದರೂ ನೆಟ್ಟಗೆ (ಸರಿಯಾಗಿ) ಕೇಳಿಕೊ! ೨೨. ಹುಚ್ಚಿ, ಕಿವಿಯನ್ನು ನಿನ್ನ ಮುಖದ ಅಗಲ ಬಿಚ್ಚಿ, ಇನ್ನೊಂದು ಕಥೆ ಕೇಳೆ. ಕಥೆ ಇದನ್ನು ಹೇಳಿದವನು ಜೈನ; ಇದರಲ್ಲಿ ಮಡಗಿ (ಅಡಗಿಸಿ)ರುವ ತತ್ತ್ವ ಗಂಡಹೆಂಡತಿಯರಿಗೆ ಬಹಳ ವೈನ (ಅನುರೂಪ, ಅನುಕೂಲ ಅದದ್ದು!) ಮಲ್ಲಿ, ಅದೇ ಈ ಕಥೆಯ ಮಹತ್ತ್ವ! ೨೩. (ಈ ಕಥೆ) ಹಿಂದೆ, ಕೃತಯುಗದಲ್ಲಿ ನಡೆದುಹೋಯಿತಂತೆ! ಯಾವುದೋ ಊರಂತೆ! ಅವರು ಅಲ್ಲಿ ಇದ್ದರಂತೆ! ಊರು, ದೇಶದ ಹೆಸರು ನನಗೆ ನೆನಪಾಗದು. ಹೆಣ್ಣು—ಶ್ರೀಮತಿ; ಗಂಡು—ಅಣ್ಣ—ವಜ್ರಜಂಘ! ೨೪. ಅವರ ಸಂಸಾರ, ಹೊಂದಿಕೊಂಡು, ಬಹು ಮುದ್ದು! ನಾರೆ ಇಲ್ಲದ ಅರಳು ಮಲ್ಲಿಗೆಯ ಹೂ ಹಾರ! ಎರಡು ಮೈಯಲ್ಲಿ ಒಂದೆ ಉಸಿರು ಸಂಚಾರ! ಇಂಥವರಿಗೆ ಒಂದು ದಿನ ಬಂತು—ಗ್ರಹಚಾರ! ೨೫. ಒಂದು ದಿನ ರಾತ್ರೆ ಸ್ನಾನ ಮಾಡಿದರಂತೆ—ಮಲ್ಲಿ, ಅದೆ ಅವರ ರೂಢಿ; ಅಗ್ಗಿಷ್ಟಿಕೆಯ ಹತ್ತಿರ

ಒದ್ದೆ ತಲೆಯನ್ನು ಕಾಯಿಸೋಣ ಎಂದು ಅವರು ಇಬ್ಬರೂ ಕೂಡಿ, ಅಗರಿನ ಪುಡಿಯನ್ನು ಕೈ ತುಂಬ ತೆಗೆದು ಕೆಂಡದ ತಲೆಯ ಮೇಲೆ ಕೆದರಿದರೆ—ಕಾಳಿಂಗ ನಾಗನ ಹಾಗೆ ಹೊಗೆ ಮೇಲಕ್ಕೆ ನೆಗೆದು, ಅವರ ಕೆದರಿದ ಮುಡಿಯನ್ನು ಹಿಡಿಯಿತು. ೨೬. ಹೀಗೆ ಅಕ್ಕಪಕ್ಕದಲ್ಲಿ ಗಂಡ ಹೆಂಡತಿಯರು—ನಡುವೆ ಏನೂ ತಟಕೆ (ತೆರೆ) ಇಲ್ಲ. ವಿಧಿರಾಯ ಒದೆಯುವಾಗ ಏನು ಮಾಡುತ್ತೀರಿ? ಮರೆತು, ಕಿಟಕಿ ತೆರೆಯಲಿಲ್ಲ. ನೀರು ಎರೆದು ಸೋತ ಮೈ, ಸೊಗಸಾದ ಗಂಧ, ಬಹಳ ಬೇಗ ಯಮನಿದ್ರೆ ಬಂದಿತು. ಹೊಗೆ ಸುತ್ತಿ, ಒಬ್ಬರು ಒಬ್ಬರ ತೋಳಿನಲ್ಲಿ, ಇಬ್ಬರೂ ಸತ್ತದ್ದೆ ಚೆಂದ! ೨೭. (ಪದ್ಯ ೨೧ರಂತೆ.) ೨೮. ಕಥೆ ಕೇಳಿದಳು, ಮಲ್ಲಿ; ಮಾತನಾಡದೆ, ಕಣ್ಣುತುಂಬ ಪಳಪಳ ನೀರು ತಂದುಕೊಳ್ಳುತ್ತ, ನನ್ನ ಕಾಲನ್ನು ಮುಟ್ಟಿಕೊಂಡು, ಕಣ್ಣಿಗೆ ಒತ್ತಿಕೊಂಡು, "ಬನ್ನಿ, ನಮ್ಮ ಮಕ್ಕಳನ್ನು ಎತ್ತಿಕೊಂಡು!" ಎಂದು ಹೇಳಿದಳು. ೨೯. ಹೇಳಿದರೆ ಕೇಳುತ್ತಾಳೆಯೆ, ನನ್ನ ಮಲ್ಲಿ? ಮೊಂಡು (ಹಟ)! ಅದಕ್ಕೆ ನಾನೇ, ಗಂಡು, ಕೇಳಿದೆ: "(ಚಾಮುಂಡಿ) ಮಹಾತಾಯಿ! ನನ್ನ ಜೀವದ ಮರಕ್ಕೆ ಮಲ್ಲಿಯೇ ತಾಯಿಬೇರು! ನಿನ್ನನ್ನು ಕೇಳುವುದು ಇಷ್ಟೆ: (ನಮ್ಮನ್ನು) ಇಬ್ಬರನ್ನೂ ಒಟ್ಟಿಗೇ (ನಿನ್ನ ಪಾದಕ್ಕೆ) ಕರೆದುಕೊ!"

೧೭. ಮರ—ಬಳ್ಳಿ: ೧. ಗಂಡು ಆದ ನನ್ನ ಜೀವದ ಬಳ್ಳಿ ಮಲ್ಲಿ (ಎಂಬ) ಮರವನ್ನು ಗಾಢವಾಗಿ ಕಚ್ಚಿ(ಕೊಂಡಿ)ದೆ, ನೋಡು! ಮಲ್ಲಿಯಿಲ್ಲದೆ, (ನನ್ನ) ಪಾಡನ್ನು ಹೇಳುವುದು ಬೇಡ! (ಆದರೂ) ಅದನ್ನು ಬಿಟ್ಟುಕೊಡುವುದಿಲ್ಲ, ಕಳ್ಳಿ (ಮಲ್ಲಿ)! ೨. ಹೊರಗೆಲ್ಲ ನನ್ನ ದುಡಿತ, ಒಳಗೆ ಅವಳ ಹಿಡಿತ, ಇದೇ ನಮ್ಮ ಮನೆಯ fileಉ, ಕಡತ! ಶಿವ ಕೊಟ್ಟ—ಸುಖಪಡುತ್ತ, ಕೊಡಲಿಲ್ಲವೇ—(ಅದೇ ಇಲ್ಲ ಎಂದು) ಬಿಡುತ್ತ, ಮಹಾತಾಯಿ ನಡಸಿದ ಹಾಗೆ ನಡೆಯುತ್ತ (ಇದ್ದೇವೆ.) ೩. ಹಣ್ಣು ನಮ್ಮ ಸಂಸಾರ. (ಅದು) ಹೇಗಾದರೂ ಇರಲಿ—(ಅದರೊಳಗಿನ) ತಿರುಳು ರಸ (ಎಲ್ಲ) ಮಲ್ಲಿ ; ನಾನು (ಬರಿಯ) ಸಿಪ್ಪೆ! ಹಿಡಿದು ಹಾಗೆಯೇ (ತೂಕ) ನೋಡುತ್ತೀರೇನು ? ಅಂಗೈಯ ಭಾರ! (ಭಾರಕ್ಕೆ ಕಾರಣ) ಎಲ್ಲ ರಸ! ನಾನು ಹಿಂಡಿ ಹಿಪ್ಪೆ! ೪. ಮಲ್ಲಿ, ನಿನ್ನ ತಾಯಿತಂದೆ ನಿನ್ನನ್ನು ನನಗಾಗಿ ಹೆತ್ತು, ಮುದ್ದಾಗಿ ಬೆಳೆಸಿದರೇನೆ? ನಾನು ಬಡವ; (ಇಂಥ) ನನ್ನ ಗುಡಿಸಿಲು ಈಗ ನಿನಗೆ ಮಡಿಲು! ಇದಕ್ಕೆ (ಈ ಭಾಗ್ಯಕ್ಕೆ)

ನಾನು ಹಿಂದೆ ಏನು (ಪುಣ್ಯ) ನಡೆಸಿದ್ದೆ! ೫. 'ಇವಳು ಗಂಡು, ಇವನು ಹೆಣ್ಣುಗೊಂಬೆ' ಎಂದು ಜನ ಹೇಳುತ್ತಾರೆ, ಗೊತ್ತು; ಹೇಳಿಕೊಳ್ಳಲಿ ಬಾರೆ. ನರಿ ನೆಗೆದು ನೆಗೆದು ಬಿದ್ದು, (ಅನಂತರ) ಎದ್ದು "ದ್ರಾಕ್ಷೆ ಇದು ಸಿಹಿಯಲ್ಲ, ನಿಂಬೆ(ಯಂತೆ ಹುಳಿ)" ಎಂದು ಹೇಳಿತಂತೆ. ೬. ಹೊಟ್ಟೆಯ ಉರಿ ಎಂಬ ಚೇಳು ಮುಟ್ಟೆ(ಕುಟುಕಿ)ದರೆ ಬಲು ಗೋಳು! ಬಹುಜನರ ಬದುಕು ಹೀಗೆಂಯೇ (ಸರಿ). ಜನರ ಕೊಡಲಿಯಂಥ ನಾಲಗೆ ಏನೇ ಎನ್ನಲಿ, ಎನ್ನದೆ ಬಿಡಲಿ, ಅದಕ್ಕೂ ಇದಕ್ಕೂ ಯಾವುದಕ್ಕೂ ಚಿಂತೆ ಏಕೆ? ೭. ಎರಡು ಕೈ (ಸೇರಿದರೆ) ಚಪ್ಪಾಳೆ! ಇಲ್ಲದಿದ್ದರೆ (ಅದು ಒಂದು) ಬಾಳೆ? ಹೆಣ್ಣೇನು, ಗಂಡೇನು, ಹೇಳೆ! ನೀನು ಇಲ್ಲಿ ಹೀಗೆ ಹಿಡಿಸಿ, (ನೀನು ಹಿಡಿಸಿದ) ಹಾಗೆಯೇ ನಾನು (ಅಲ್ಲಿ) ಮಡಿಸಿ, (ಇಬ್ಬರೂ ಸೇರಿ) ಬದುಕೆಂಬ ಬುಕ್ಕಿನ (ಪುಸ್ತಕದ) ಹಾಳೆಯನ್ನು ತಿರುವೋಣ. ೮. ಮಲ್ಲಿ, ಅರ್ಧನಾರೀಶ್ವರನಾದ ಹರನನ್ನು ನೆನೆ; ನನ್ನ ಆ ಅಪ್ಪನ ಹತ್ತಿರ (ಅವನ ಎತ್ತರಕ್ಕೂ ನಿಂತ) ಮಗ ನಾನು! ಒಸಿ (ಸ್ವಲ್ಪ)— ಗಂಡು ಹೆಣ್ಣಿನಂತೆ, ಹೆಣ್ಣು ಗಂಡಿನಂತೆ ನಡೆದುಕೊಂಡರೆ— ಅದೇ ಅವನಿಗೆ (ಬಿಲ್ವ) ಪತ್ರೆ(ಯ ಪೂಜೆ!) ೯. ಗಂಡೂ ಹೆಣ್ಣೂ ಒಂದಾಗದ ಹೊರತು, ಅನ್ಯೋನ್ಯ ಎನ್ನುವ ಮಾತು ಏತಕ್ಕೆ ಆದೀತು? ಜನರು, ಮರಬಳ್ಳಿಗಳನ್ನು ನೋಡಿ(ಯಾದರೂ), ಭೇದಭಾವಗಳನ್ನು ಮರೆತು ಜೋಡಿ(ಯಾಗಿ ಬದುಕು ವುದನ್ನು) ಕಲಿಯಬಾರದೆ? ೧೦. ನಾನು ಹಡಗು, ನೀನು (ಮಲ್ಲಿ, ಗಾಳಿ ಹಡಗನ್ನು ಮುಂದಕ್ಕೆ ನಡಸುವುದಕ್ಕೆ ನೆರವಾಗುವ) ಹಾಯಿ(ಪಟ)! (ನೀನು) ನನ್ನ ಮನೆತಾಯಿ! (ನನ್ನ ಸಂಸಾರದ ಹಡಗು ನಡೆಯುವುದಕ್ಕೆ) ನೀನು ನೀರು, ನೀನು ಗಾಳಿ, (ನೀನೆ) ಬೆಳಕು! ನಿನಗೆ ನಾನು ಸಿಪಾಯಿ, (ನನಗೆ) ನೀನೆ ದಳವಾಯಿ! ನಿನ್ನಿಂದ ನಾನು ಮೇಲಕ್ಕೂ ಕೆಳಕ್ಕೂ (ಏಳಬೇಕು, ಇಲ್ಲವೆ ಬೀಳಬೇಕು!)

೧೮. ಗದ್ಯ—ಪದ್ಯ: ೧. ಗದ್ಯ ಗಡಹಾರೆ! ಪದ್ಯ-ಪೆಟ್ರೋಲ್! (ಗದ್ಯವಾಗಲಿ ಪದ್ಯವಾಗಲಿ) ಯಾವುದರಲ್ಲಿಯೂ ಮಾತು ಪೋಲು (ವ್ಯರ್ಥ) ಆಗಬಾರದು! ೨. ಒಂದು (ಗದ್ಯ) ಕೆತ್ತುತ್ತದೆ, ಒಂದು (ಪದ್ಯ) ಸುಡುತ್ತದೆ: ಎರಡೂ ಮನಸ್ಸನ್ನು (ಅಥವಾ ಮನುಷ್ಯನನ್ನು) ಮೇಲಕ್ಕೆ ಎತ್ತುತ್ತದೆ!

೧೯. ಗರುಡವಾಹನ: ೧. ಗೋವಿಂದಾ ಗೋವಿಂದಾ, ಗರುಡ

ವಾಹನಾ ಗೋವಿಂದಾ! ೨. ಒಂದರ ಮೇಲೆ ಒಂದು ಜನ ತುಂಬಿಕೊಂಡು, ಬಸ್ಸು ಉರುಳಿತು. ೩. ನಿನ್ನ ಕಾಲನ್ನು ಇಲ್ಲಿ ಎಲ್ಲಿ ತಲೆಯ ಮೇಲೆ ತಂದು ಮಡಗು (ಇರಿಸು)ತ್ತೀಯೆ? ೪. ಕೊಳೆತ ಹೆಣವನ್ನು ತಿಂದು (ಬಂದ) ಯಾವನದು ಈ ಬಾಯಿವಾಸನೆ? ೫. (ಯಾವನೋ) ಬೀಡಿ ಹಚ್ಚಿದ? ಹಡಕು (ದುರ್ವಾಸನೆ), ಅಸಹ್ಯ! ಗೊಬ್ಬರ ಸುಟ್ಟ ಗಂಧ! ೬. (ಇನ್ನೊಬ್ಬ) ಬಾಯಿಯ ತಂಬುಲ ಚಿರಕ್ (ಎಂದು) ಪೀಚಿದ (ಪಿಚಕಾರಿಯಲ್ಲಿ ಹೊಡೆದ ಹಾಗೆ ಉಗಿದ!) ಚೆನ್ನಾಗಿ ಓಕುಳಿ ಬಿತ್ತು! ೭. (ಬಸ್ಸಿನ) ಒಳಗೆ ಸಿಕ್ಕಿ, ಮೈಯ ಮೂಳೆ ಮಾಂಸ ಬೆಂದು ಬಜ್ಜಿಯಾಯಿತು. ೮. ಎಷ್ಟೇ ಮುಕ್ಕಲಿ (ಬಾಯಿಗೆ ತುಂಬಿಕೊಳ್ಳಲಿ), ಹಾಳಾದ ಈ ಬಸ್ಸಿಗೆ ಮಂದ (ಅಜೀರ್ಣ) ಆಗುವುದಿಲ್ಲ. ೯. (ಇಷ್ಟೆಲ್ಲ ಗರುಡವಾಹನಮಾಡಿದರೂ, ಸಂಪಾದನೆಯಲ್ಲಿ) ಹಾಗ ಸಾವುಕಾರ, ಮೂರು ಹಾಗ ಅವನು ಇವನು, ತಿಂದ.

೨೦. ಹೋಯ್ತು ನಿಯತ್ತು: ಪ. ನಿಯತ್ತು (ನಿಯತವಾದ ನಡೆ, ನುಡಿ) ಹೋಯಿತು. ೧. ಆಡಿದ ಹಾಗೆ ಆಡಿದ್ದನ್ನು ನಡಸುವುದು ಸತ್ತು ಹೋಯಿತು. ೨. ತಲೆ ಕತ್ತು ಎತ್ತಿಕೊಂಡು ತಿರುಗದ ಹಾಗೆ ಆಗಿದ್ದೇವೆ. ೩. ಮಳೆ ಇಲ್ಲ, ಬೆಳೆ ಇಲ್ಲ, ಒಂದು ತುತ್ತೂ ಸಿಕ್ಕದು. ೪. ಎಲ್ಲೆಲ್ಲೂ ಒಂದಕ್ಕೆ ಇಪ್ಪತ್ತು Black Market. ೫. ಧರ್ಮ ಕರ್ಮದ ಬದಲು ಲಂಚ ರುಷುವತ್ತು (ಬಂದಿದೆ.) ೬. (ಮನೆಯಲ್ಲಿ) ಅನ್ನ ಇಲ್ಲ; ಸುತ್ತೂ ಮುತ್ತೂ ಹೋಟಲು, ಸಿನಿಮ. ೭. ಹೆಣ್ಣುಗಂಡಿನ ನಡತೆ ಎಲ್ಲಿಂದ ಎಲ್ಲಿಗೆ ಬಂತು? ೮. ಹಿರಿಯರೇ ಹಾವಾಗಿ, ದೇಶವೇ ಹುತ್ತ. ೯. ಅಲ್ಲಿ ಒಬ್ಬರು, ಇಲ್ಲಿ ಒಬ್ಬರು ನೆಟ್ಟಗೆ (ಋಜುವಾಗಿ) ಇದ್ದಾರೆ, ಗೊತ್ತು. ೧೦. ಏನೇ ಆದರೂ ನಮಗೆ ನಮ್ಮ ಗೈರತ್ತು (ಸಾಮರ್ಥ್ಯ) ಇದ್ದರೂ . . . ೧೧. ಅಣ್ಣಮ್ಮ ತಾಯಿಯೇ ನಮ್ಮ ಮೇಲೆ ಕುಳಿತು ಕಾದರೂ . . . ೧೨. ಜೀವವಿಲ್ಲದ ದೇಹ ಇದ್ದು ಏನು ಬಂತು? (ನಿಯತ್ತು ಹೋದಮೇಲೆ?)

೨೧. ಕಂಡಕ್ಟರ್ ಕಂದಾರಿ: ೧. "ಕಂದಾರೀ! ಕಂದಾರೀ! ಕಂಡಕ್ಟರ್, ಏ ಕಂದಾರೀ!" (ಎಂದು) ಬಸ್ಸಿನ ತಾವು (ಹತ್ತಿರ) ಒಂದು ಎರಡು ಮೂರು ನಾಲ್ಕು ಸಾರಿ (ಸಲ) ಕೂಗು ಕೇಳಿಸಿತು. ೨. ಇವನು ಯಾವನು ಈ ಕಂದಾರಿ, ಬಸ್ ಕೆಲಸಕ್ಕೂ ಬಂದಾ ರೀ? (ಕಂದಾರಿಯಾದರೆ)

ಆರಡಿ ಆಳು, ದೊಗಳೆ ಪೈಜಾಮಾ! (ಇವನ ದೇಹ) ಬಸ್ ಓಡಿಸುತ್ತದೆಯೆ? ರಾಮ ರಾಮ! ೩. ಸುತ್ತಿನ ಬೀದಿಯ ಸಮುದ್ರದಲ್ಲಿ ಕಣ್ಣಿನ ಹಡಗನ್ನು ಓಡಿಸಿದೆ; 'ಕಂದಾರಿ ಎಲ್ಲಿ? ಕಂದಾರಿ ಎಲ್ಲಿ?' ಎಂದು ಖಾಕಿ ಕುಡತ (ಅಂಗಿ) ನೋಡಿಸಿದೆ. ೪. ತರಗೆಲೆ ತೂರಿ ಬಂದ ಹಾಗೆ ಕಂದಾರಿ ಓಡಿ ಓಡಿ ಬಂದ. ನಾಕೂ ಚಿಲ್ಲರೆ ಅಡಿ ಇರಬಹುದು—ಈ ಹೈದ (ಹುಡುಗ) ಕಂದಾರಿ ಹೇಗೆ ಆದಾನು? ೫. ತಲೆಯ ಮೇಲೆ ಕಂದಾರಿ(ಯವರ) ಪಗಡಿ (ರುಮಾಲು) ಇಲ್ಲ! ಅಃಕ್ಷಿ ಅಃಕ್ಷಿ (ಎನ್ನುವ ಈ) ಶೀತ ನೆಗಡಿ! ಸಿಂಬಳ ಸುರಿಸುವ ಇವನು ಕಂದಾರಿಯೆ! ಕಿವಿಯ ತುದಿಯಲ್ಲಿ ಯಾವುದೋ ದೇವರ ದವನ! ೬. ಇವನು ಹೇಗೆ ಕಂದಾರಿ ಆದಾನು? ಈ ಮೋರೆ (ಮುಖ) ಕನ್ನಡ ಸೀಮೆದೇ ರೀ! ಅವನು ಮಾತಾಡುವುದು ಅಕ್ಕಿತಿಮ್ಮನಹಳ್ಳಿ ಮುಕ್ಕ(ಮೂರ್ಖ, ಅಜ್ಞ)ನ ಹಾಗೆಯೇ ನನಗೆ ಕೇಳಿಸಿತು! ೭. ನನ್ನ ಸಂದೇಹವನ್ನು ಕುರಿತು ಅವನನ್ನೆ ಕೇಳಿದೆ. (ಅದಕ್ಕೆ) ಅವನು (ತನ್ನ) ಮುಖಕ್ಕೆ ನಾಚಿಕೆಯ ಲೇಹವನ್ನು ಬಳಿದುಕೊಂಡು, "ಸುಮ್ಮನೆ ಎಲ್ಲರೂ ನನ್ನನ್ನು ಹಾಗೆಂದು ಕರೆಯುತ್ತಾರೆ. ಇದೆ ಕಾಣ್ರೀ—ಇವರು ಇಕ್ಕುವ ಹಾರೆ (ಶೂಲ)" ಎಂದ. ೮. ಏಕೋ ಇವನ ಮಾತನ್ನು ನಂಬುವುದಕ್ಕೆ ಆಗುವುದಿಲ್ಲ. ನನಗೋ—ಕಿವಿಯ ಬಾಯಿ ಜೊಲ್ಲು ಬಿಡುತ್ತದೆ. ಇವನ ನ್ಯಾಸ್ತ(ಸ್ನೇಹ)ದವರಿಗೆ ಒಂದಷ್ಟು ನಾಷ್ಟಾ (tiffin) ಕೊಡಿಸು; ಕತೆ ಅದು ಸ್ಪಷ್ಟವಾಗಿ ಬರುತ್ತದೆ" (ಎನ್ನಿಸಿತು.) ೯. "ಪುಟ್ಟರಂಗಪ್ಪ, ನಿನಗೆ ಕಂದಾರಿ ಗೊತ್ತೇನು?" "ನಾನೇ ಅಲ್ಲವೆ ಅವನನ್ನು ಇಷ್ಟು ಹೊತ್ತೂ ಕರೆದದ್ದು!" "ಹಾಗಾದರೆ, ಅವನಿಗೆ ಈ ವಿಚಿತ್ರವಾದ ಹೆಸರು ಏಕೆ?" "ಓಹೋ! ಅವನ ಕಥೆ ಕೇಳಿಸಿಕೊಬೇಕೇನು?" ೧೦. ಕೇಳಿ, ಅಪ್ಪ: ಇವನು ನಮ್ಮ ಹಳ್ಳಿಯ ಮುಕ್ಕ (ಮೂರ್ಖ). ಹೆಂಗಸು ಎಂದರೆ ಇವನಿಗೆ ಅಂಜಿಕೆ, ಪುಕ್ಕಲು (ದಿಗಿಲು)! ಅಪ್ಪ ಅಮ್ಮನಿಗೆ ಇವನು 'ಭೈರವ' (ಎಂಬ ಹೆಸರಿನ) ಹುಡುಗ; ಇವನಿಗೊ ಹೆಂಗಸು ಎಂದರೆ ನಡುಕವೋ ನಡುಕ! ೧೧. ಮೂರು ವರ್ಷದ ಹಿಂದೆ ಇವನು ಇಲ್ಲಿಗೆ ಬಂದ; ಸತ್ಯವಂತ, ಚೆನ್ನಾಗಿ ಕೆಲಸ ಮಾಡುತ್ತಿದ್ದ; ticket-book, trip-sheet ಇವೆಲ್ಲಾ ಟಾಕು ಟೀಕು (ನಿಷ್ಕೃಷ್ಟ)— ಒಂದು ಇಷ್ಟೂ ತಪ್ಪಿಲ್ಲ! ೧೨. ನಾಲ್ಕು ತಿಂಗಳ ಹಿಂದೆ ಒಂದು ಅಮ್ಮ ಬಂದಿತು; ಅವಳ ಟಿಕೆಟು ವಸೂಲಿಗೆ ನಮ್ಮ ಭೈರೂ ಬಂದವನೆ

—"ಅಮ್ಮ, ಟಿಕೆಟ್ಟು?" ಎಂದರೆ, ಆ ಅಮ್ಮ 'ಕೈಸೆ (ಎಂಥ) ಟಿಕೇಟು?' ಎಂದಿತು. ೧೩. ಇವನ ಕನ್ನಡ ಅದಕ್ಕೆ ಅರ್ಥವೇ ಆಗದು, ದುಡ್ಡು ಕೊಡುವುದಕ್ಕೆ ಕೈ ಮುಂದೆಯೇ ಸಾಗದು; ಕಂದಾರಿ (ತನ್ನ ಲಂಗಗಳ ಒಳಗೆ (ಸುಮ್ಮನೆ) ಇತ್ತು, ರಂಗುವಸ್ತ್ರ (ಅದರ) ತಲೆಯ ಮೇಲೆ ಹಾರಾಡುತ್ತಿತ್ತು. ೧೪. "ಇಲ್ಲಿ ವಸೂಲಿಗೆ ದಾರಿ ಏನಪ್ಪ? ದೇವರೆ, ಈ ಒಂದು ಬಾರಿ (ನನ್ನನ್ನು) ಬಚಾವ್ ಮಾಡು (ಕಾಪಾಡು!) ಈ ಹೆಂಗಸಿಗೆ ಒಳ್ಳೆಯ ಬುದ್ಧಿ ಕೊಡು! ಇವಳು ಈ ಬಸ್ಸಿಗೆ ಟಿಕೆಟ್ಟು ಕೊಂಡುಕೊಳ್ಳಲಿ." ೧೫. ಹುಡುಗ ಪೆಚ್ಚಾದ್ದನ್ನು ಕಂಡು, ಆ ಕಂದಾರಿ, ಊರಿನ ಮಾರಿ ಕುರಿಯನ್ನು ಕಂಡರೆ ಹೇಗೋ ಹಾಗೆ—ಹೂಂಪ್ಪ—ಹಿರಿಹಿರಿ ಹಿಗ್ಗಿ, ದುಡ್ಡನ್ನು ಚೀಲದಿಂದ ಎತ್ತುವ ಹಾಗೆ ಬಗ್ಗಿ— ೧೬. ಅವರ ಬಟ್ಟೆಯನ್ನು, ಷರಟು ಅವರ ಹೊಟ್ಟೆಯನ್ನು ಹೇಗೆ ಮುಚ್ಚುತ್ತದೆ (ಎಂಬುದನ್ನು) ನೀವು ಕಂಡಿದ್ದೀರಲ್ಲವೆ? ಅದನ್ನು ಯಾವುದೋ ಮಾಯದಲ್ಲಿ ಹಾಗೇ ಹಿಡಿದು ಎತ್ತಿ, ಭೈರೂವಿನ ನೆತ್ತಿಯನ್ನು ಗುರಿಯಾಗಿ ಮಾಡಿಕೊಂಡು— ೧೭. ಚಿಕ್ಕ ಮಕ್ಕಳು ಹಿಡಿದು ಚೀಪುತ್ತವಲ್ಲ ಅಪ್ಪ—ಚಿರಕ್ ಚಿರಕ್—ಅದನ್ನು ಕೈಯ ತುಂಬ ದಪ್ಪ—ಭೈರೂ, ಪಾಪ, ಮೂತಿಯ ಮೇಲೆ ಕೆಳಗೆ ಎಲ್ಲಾ ಹಾಲಿನ ಅಭಿಷೇಕ! ಗುಲ್ಲ (ಗಲಾಟೆಯನ್ನು) ಕೇಳುತ್ತೀಯ? ೧೮. ಭೈರೂ ಹೇಳಿದ: "ಸೋತೆ! ಶರಣು ನಮ್ಮವ್ವ! ಎಗ್ಗು ಸಿಗ್ಗು (ಸಂಕೋಚ ನಾಚಿಕೆ) ಇಲ್ಲದ ಕಂದಾರಿ ದೆವ್ವ!" ಬಸ್ಸಿಗೆ ಬಸ್ಸೇ (ಈ ದೃಶ್ಯಕ್ಕೆ) ಸಾಕ್ಷಿಯಾಗಿ ಹೋ ಎಂದು, "ಪುಟ್ಟ ಭೈರೂ, ನೀನು ಕಂದಾರಿ ಪಕ್ಷಿ!" ಎಂದಿತು. ೧೯. ಇದೆ ಕಣಪ್ಪ, ಕಥೆ: ಕಂದಾರಿ ಹಾಲನ್ನು ಕುಡಿದು, ಆ ಹೊತ್ತಿನಿಂದ ಭೈರೂ 'ಕಂದಾರಿ' (ಆದ.) ಇದನ್ನು ನೆನಸಿಕೊಂಡು, ನಾವು ಬಸ್ಸಿನವರು ಹತ್ತು ನೂರು ಬಾರಿ, ಪಕಪಕ ನಗುತ್ತೇವೆ. ೨೦. ಕಂದಾರಿ ಹಾಲಿನ ಚಿಲುಮೆಯ ಕಥೆ ಪೊಗದಸ್ತಾಗಿ (ಭರ್ಜರಿಯಾಗಿ) ಇದೆ, ಪುಟ್ಟ ರಂಗಪ್ಪ! ನೀವು ಅಲ್ಲಿ ಇದ್ದವರು ಪುಣ್ಯ ಮಾಡಿದ್ದಿರಿ! ನಾನು ಅಲ್ಲಿ ಇರಲಿಲ್ಲವಲ್ಲಾ (ಎಂದು) ಅದೇ (ನನಗೆ) ವ್ಯಥೆ!

೨೨. ಅರಳಿಯ ಮರ: ೧. ಹೋಯಿತಲ್ಲೋ, ಹೋಯಿತಲ್ಲೋ ನಮ್ಮ (ಹಳ್ಳಿಯ) ಅರಳಿಯ ಮರ; ಪೇಟೆ ಪಟ್ಟಣಕ್ಕೆ ಈ ಸುಡುಗಾಡಿನ ಸೌದೆಯ ಬರ (ಕೊರತೆ) ಬಂದು, (ಹೋಯಿತಲ್ಲೋ . . .) ೨. ಹಳ್ಳಿಯ

ಮುಖದಲ್ಲಿ ಕೆಂಪು ಚಿಗುರಿನ ಕುಂಕುಮದ ಹಾಗಿತ್ತು; ಬಲಿತ ಕರಿಯೆಲೆ ಚಾವಡಿಯ ಪಕ್ಕದಲ್ಲಿ ಛತ್ರಿಯ ಹಾಗಿತ್ತು; ನೂರು ಸಾವಿರ ಹಕ್ಕಿ ಪಕ್ಷಿ ಎಷ್ಟು ಸುಖವಾಗಿ (ಇದ್ದುವು); ದೇವರೇ, ಜಗತ್ತಿನಲ್ಲಿ ಇಂಥದೂ ಅನ್ಯಾಯ ಉಂಟೆ? ೩. ಮಕ್ಕಳಿಲ್ಲದ ಮುತ್ತೈದೆಯರು ಇಲ್ಲಿ ಸುತ್ತಿ ಸುತ್ತಿ ಬರುವರು; ದೂರದ ಹಳ್ಳಿಯವರು ಇಲ್ಲಿ ಕುಳಿತು, ತಂದ ಬುತ್ತಿ ಬಿಚ್ಚುತ್ತಿದ್ದರು; ತಂಪು ಪಾನಕ ಕೋಸುಂಬರಿ ಇಲ್ಲಿ ಒಪ್ಪತ್ತೂ ತಪ್ಪದು; (ಇಂಥ) ಮರಕ್ಕೆ ಇದ್ದಕ್ಕಿದ್ದ ಹಾಗೆ ಬರಬಾರದ ಆಪತ್ತು ಬಂದಿತು! ೪. ಹೋಯ್ತು ಮರ—ಓ—(ಈಗ) ರುಂಡವಿಲ್ಲದ ಮುಂಡವೇ ಥೇಟು! ಸಾಲು ನಾಗರಕಲ್ಲಿನ ಮೇಲೆ ಜೋರಾದ ಬಿಸಿಲಿನ ಏಟು (ಬಿದ್ದು), ಕಲ್ಲಿನ ಜಗತಿ (ಜಗುಲಿ) ಕೋಪ ಮಾಡಿಕೊಂಡು ಕೆಂಡವಾದ ಹಾಗೆ ಮುಟ್ಟಿದರೆ ಮುನಿಯುತ್ತದೆ. ಆದರೂ, ಹೀಗೆ ಆತಿ ಆಗ ಬಾರದು. (ಆದರೆ, ಇದೇ ಗತಿ!)

೨೩. ಛೀ: ೧. ಪುಂಡು ಮಾತನ್ನು, ಛೀ, ಸುಡು! (ಅದು ಕಿವಿಗೆ ಕಾದ ಗುಳ (ಕಬ್ಬಿಣದ ಸಲಾಕಿ)! (ಅದನ್ನು) ಹೇಳಿದವರ ಬಾಯಲ್ಲಿ ಹುಳು ಬೀಳುತ್ತದೆ. ೨. ಭಂಡಮಾತನ್ನು ಬರೆದು, ಕೈ ಸೇದಿಯೇ ಹೋಗುತ್ತದೆ! ಅದು (ಇಂಥ ಬಾಯಿನ ಇಂಥ ಕೈಯಿನ ಜೀವ) ತಾಯಿಯ ಹಾಲು ಕುಡಿಯ ಲಿಲ್ಲ. ಏನನ್ನೋ ತಿಂದ ಮೈ (ಅದು)! ೩. ಮನಸ್ಸು (ಎಂಬುದು) ಕೋತಿ ಮರಿ—(ಅದು) ಸುಲಭದಲ್ಲಿ (ಹಿಡಿತಕ್ಕೆ) ಸಿಕ್ಕುವುದಿಲ್ಲ! ಮಾತಿಗೆ ಒಂದು, ಮನಸ್ಸಿಗೆ ಎರಡು, ಗರಿ ಕಿತ್ತು (ಹಾಕಬೇಕು)! ೪. ನೀನೇ (ನಿನ್ನ) ಮನ ಸ್ಸಿಗೆ ಸದಾ ಒಂದು ಕನ್ನಡಿ ಎತ್ತಿ ಹಿಡಿ! ಇದನ್ನೇ ಬಾಪು ನಮಗೆ ಹೇಳಿದ್ದು: "ಮಾಡು, ಇಲ್ಲವೆ ಮಡಿ (ಸಾಯಿ)!"

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ.

ರಾಜರತ್ನಂ ಪದ್ಯಪಂಕ್ತಿ

*

ಶಾಂತಿ

ರತ್ನನ ಪದಗಳು

ಮಹಾಕವಿ ಪುರುಷ ಸರಸ್ವತಿ

ನೂರು ಪುಟಾಣಿ

ನಾಗನ ಪದಗಳು

* * *

ತುತ್ತೂರಿ

ಕಡಲೆಪುರಿ

ಚುಟಕ

ಕಲ್ಲುಸಕ್ಕರೆ

ತಾರೆ

ವಂದೇ ಗಾಂಧಿಜಿ

ಮುದ್ದು ಕೃಷ್ಣ

ತುಂಟ ಗಣಪತಿ

*

ದೊರೆಯುವ ಸ್ಥಳ:

ಸತ್ಯಶೋಧನ ಪುಸ್ತಕ ಭಂಡಾರ

ಕೋಟೆ, ಬೆಂಗಳೂರು

ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ** ರೂ. ೨/೪

(ಕ್ಯಾಲಿಕೊ ಪ್ರತಿ) ರೂ. ೩/೪

ಶ್ರೀ ಕೆ. ವಿ. ಅಯ್ಯರ್ ಅವರು ಬರೆದುದು.

ಶ್ರೀ ಡಿ. ವಿ. ಗುಂಡಪ್ಪ ಅವರ ಮುನ್ನುಡಿಯೊಡನೆ.

●

೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ** ರೂ. ೧/೧೨

(ಕ್ಯಾಲಿಕೊ ಪ್ರತಿ) ರೂ. ೨/೧೨

ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ಅವರು ಸಂಸ್ಕೃತದಿಂದ ಅನುವಾದ ಮಾಡಿದ್ದು.

ಶ್ರೀ ಎ. ಆರ್. ಕೃಷ್ಣಶಾಸ್ತ್ರೀ ಅವರ 'ಕವಿ ಕಾವ್ಯ ಪರಿಚಯ'ದೊಂದಿಗೆ.

●

೩. **ಮೊನ್ನ ವನ್ನ** ರೂ. ೨/-

(ಕ್ಯಾಲಿಕೊ ಪ್ರತಿ) ರೂ. ೩/-

ಬೆಲ್ಜಿಯಂ ದೇಶದ ಮಾರಿಸ್ ಮ್ಯಾಟರ್‌ಲಿಂಕ್ ಎಂಬ ಕವಿಯ ಮೂರಂಕದ ನಾಟಕವನ್ನು ಶ್ರೀ ಎಸ್. ಜಿ. ಶಾಸ್ತ್ರಿ ಅವರು ಕನ್ನಡಿಸಿ ಕೊಟ್ಟಿದ್ದು.

ಶ್ರೀ ಜಿ. ಪಿ. ರಾಜರತ್ನಂ ಅವರ 'ಕವಿ ಕಾವ್ಯ ಪರಿಚಯ'ದೊಂದಿಗೆ.

●

೪. **ನಾಗನ ಪದಗಳು** ರೂ. ೧/೪

(ಕ್ಯಾಲಿಕೊ ಪ್ರತಿ) ರೂ. ೨/೪

'ರತ್ನನ ಪದಗಳು' ಜಾತಿಯ ಹೊಸ ಕವನಗಳ ಸಂಗ್ರಹ.

ಶ್ರೀ ರಾಜರತ್ನಂ ಬರೆದವು.

●

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೆಜ್, ಬೆಂಗಳೂರು